WPP No. SK/MNG/WPP/69 D.O.P - 15th of every month from Udupi HPO
ಬೆಲೆ ರೂ.2.50

ದಶಮಾನೋತ್ಸವ ಸಂಭ್ರಮ

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2010

॥ ಧಿಯೋ ಯೋನಃ ಪ್ರಚೋದಯಾತ್ ॥


**ಹೆಬ್ಬಾರ್ ಎಂಟರ್‌ಪ್ರೈಸಸ್**
ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ – 576 101.
ಶುಭ ಸಮಾರಂಭಗಳಿಗೆ ಬೇಕಾಗುವ ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್ ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.
ಫೋನ್ : 2531493 (O), 2530851 (R), ಮೊಬೈಲ್ : 94484 37893

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-10 ಸಂಚಿಕೆ-7 ಪುಟಗಳು-8 Registered Under No.J/UDP/1260/2009-2011 Dated from 01-12-2008 to 30-11-2011.

ಶ್ರೀ ಕೃಷ್ಣಾಯನ – ಕೆ. ಆತ್ಮಾರಾಮ ಶಾಸ್ತ್ರಿ, ಬೆಂಗಳೂರು ಪುಟ-2

''ಹರಿಕಥೆ ಅಪೇಕ್ಷಿತವೇ? ಅನಪೇಕ್ಷಿತವೇ?-೫ – ಮ.ನಾ.ಹೆಬ್ಬಾರ, ಎಂ.ಎ., ಬಿ.ಎಡ್. ಪುಟ-4



ವೈದ್ಯಕೀಯ ವೇದಿಕೆ– ಪ್ರಶ್ನೆ ಮತ್ತು ಉತ್ತರ – ಡಾ। ವೈ. ಸುದರ್ಶನ ರಾವ್ ಪುಟ-5



ಕುಮಾರಿ ಕೃತಿಕಾ ರಾವ್ ಪುಟ-3

## ಕಾಳಹಸ್ತೇಂದ್ರ ಶ್ರೀಗಳ ಪಟ್ಟಾಭಿಷೇಕ – ಶೃಂಗೇರಿ ಶ್ರೀಗಳ ಆಶೀರ್ವಚನ



ಕಟಪಾಡಿಯ ಪಟ್ಟಾಭಿಷೇಕ ಸಭೆಯಲ್ಲಿ ಅನುಗ್ರಹ ಭಾಷಣ ಮಾಡಿದ ಗುರುಗಳ ಆಯ್ದ ಮಾತುಗಳು–''ಶ್ರೀ ಕಾಳಹಸ್ತೇಂದ್ರ ಶ್ರೀಗಳು ಶೃಂಗೇರಿಗೆ ಬಂದು ನಮ್ಮಲ್ಲಿ ಪಟ್ಟಾಭಿಷೇಕಕ್ಕೆ ದಿನ ಗೊತ್ತು ಮಾಡಲು ಕೇಳಿದಾಗ ವೃಷಭ ಮಾಸ – ಶಮಿ (ಅಂದರೆ 7/6/10) ಪ್ರಸಕ್ತ ಎಂದು ತಿಳಿಸಿದಾಗ ಮಳೆಯ ಆತಂಕವನ್ನು ತೋರ್ಪಡಿಸಿದರು. ಆಗ ಗುರುಗಳ ಮೇಲೆ ನಂಬಿಕೆಯಿಟ್ಟು ಮುನ್ನಡೆಯಿರಿ ಎಂದೆವು. ಹಾಗೆಯೇ ಈ ಮಹೋತ್ಸವವು ನಿರ್ವಿಘ್ನವಾಗಿ ನಡೆದಿದೆ. ಶ್ರೀಗಳಿಗೂ ನಮಗೂ ಸಂತೃಪ್ತಿ ತಂದಿದೆ'' ಎಂದಾಗ ಜನಸ್ತೋಮ ಚಪ್ಪಾಳೆ ಯೊಂದಿಗೆ ಹರ್ಷ ವ್ಯಕ್ತಪಡಿಸಿತು. ಹೆಚ್ಚಿನ ಜನರು ನಾವು ಸತ್ಕಾರ್ಯವನ್ನು ಮಾಡುತ್ತಿದ್ದೇವೆ, ಆದರೂ ಸಂಕಷ್ಟಗಳು ತಪ್ಪಿದ್ದಲ್ಲ ಹಾಗೆಯೇ ಅಧರ್ಮ ಮಾಡಿದವರು ಸಂತೋಷದಲ್ಲಿದ್ದಾರಲ್ಲ ಎಂಬ ಸಂಶಯದಲ್ಲಿರುತ್ತಾರೆ. ಯಾಕೆ ಸತ್ಕಾರ್ಯ ಮಾಡಬೇಕು. ದೇವರು ಧರ್ಮ ಏತಕ್ಕಾಗಿ ಎಂಬ ಗೊಂದಲಕ್ಕೆ ಉತ್ತರಿಸಿದ ಶ್ರೀ ಶ್ರೀ ಭಾರತೀತೀರ್ಥರು ಈ ಜನ್ಮದಲ್ಲಿ ನೀವು ಒಳ್ಳೆಯ ಕರ್ಮಗಳನ್ನು ಮಾಡಿದರೆ ಮುಂದಿನ ಜನ್ಮದಲ್ಲಿ ನಿಮಗೆ ಒಳ್ಳೆಯದಾಗುವುದು. ಹಿಂದಿನ ಜನ್ಮದಲ್ಲಿ ಅವರು ಒಳ್ಳೆಯ ಕರ್ಮಗಳನ್ನು ಮಾಡಿದ್ದರಿಂದ ಈಗ ನಿಶ್ಚಿಂತರಾಗಿ ಸುಖವಾಗಿದ್ದಾರೆ. ಹಾಗೆಯೇ ನಾವು ಮಾಡುವ ಕೆಲಸಗಳು ನಮ್ಮ ಜನ್ಮಾಂತರದಿಂದ ಬರುತ್ತದೆ. ಭಿಕ್ಷುಕನೊಬ್ಬ ಶ್ರೀಮಂತನಲ್ಲಿ ಭಿಕ್ಷೆಯನ್ನು ಕೇಳಿದಾಗ ಅವನು ಕೊಡಲಿಲ್ಲ. ಆಗ ಭಿಕ್ಷುಕ ನಾನು ಹಿಂದೆ ನಿನ್ನ ಹಾಗೆಯೇ ಲೋಭಿಯಾಗಿದ್ದೆ. ಸತ್ಕಾರ್ಯಗಳನ್ನು ಮಾಡಲು ಸಾಧ್ಯವಿದ್ದರೂ ಮಾಡಲಿಲ್ಲ. ಹಾಗಾಗಿ ಈ ಜನ್ಮದಲ್ಲಿ ಭಿಕ್ಷುಕನಾಗಿದ್ದೇನೆ. ನಿನಗೆ ಮುಂದಿನ ಜನ್ಮದಲ್ಲಿ ನನ್ನ ಹಾಗೆಯೇ ಆಗುವ ಮನಸ್ಸಿದ್ದರೆ ಭಿಕ್ಷೆ ನೀಡಬೇಡ. ಇಲ್ಲದಿದ್ದರೆ ಭಿಕ್ಷೆ ನೀಡಿ ಬರುವ ಜನ್ಮಗಳಲ್ಲೂ ಸುಖವಾಗಿರು'' ಎಂದ. ನೀವೂ ಮುಂದಿನ ಜನ್ಮಗಳ ಶ್ರೇಷ್ಠತೆಗಾಗಿ ಇಂದು ಸತ್ಕಾರ್ಯ, ಧರ್ಮದಲ್ಲಿ ನಡೆಯಿರಿ ಎಂದು ಆಶೀರ್ವಚಿಸಿದರು

## ಶ್ರೀಶಾರದಾ ವೇದಿಕೆಯ ಮಹಾಪೋಷಕರಾಗಿ ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್



ಶ್ರೀ ಟಿ.ಎನ್. ಶ್ಯಾನುಭಾಗರು ಕಳೆದ 5 ವರ್ಷಗಳಿಂದ ಕೆನರಾ ಇಂಜಿನಿಯರಿಂಗ್ ಕಾಲೇಜು, ಬೆಂಜನಪದವು ಮಂಗಳೂರು ಇಲ್ಲಿ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ವಿಭಾಗದಲ್ಲಿ ಪ್ರೊಫೆಸರಾಗಿಯೂ, Head of the Department ಆಗಿಯೂ ಕೆಲಸ ಮಾಡುತ್ತಿದ್ದಾರೆ. ಇದಕ್ಕಿಂತ ಮೊದಲು ಅವರು ಶ್ರೀದೇವಿ ಮಹಿಳಾ ಇಂಜಿನಿ ಯರಿಂಗ್ ಕಾಲೇಜು, ಹೈದರಾಬಾದ್‌ನಲ್ಲಿ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗದ H.O.D. ಆಗಿ 2 ವರ್ಷ ಕೆಲಸ ಮಾಡಿದ್ದಾರೆ. ಇವರಿಗೆ ಒಟ್ಟು 30 ವರ್ಷಗಳ ಕೈಗಾರಿಕಾ ಅನುಭವವಿದ್ದು Indian Drugs & Pharamaceuticals Limitedನಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಕೆಲಸ ಮಾಡಿದ್ದಾರೆ. ಇವರು ಇಲ್ಲಿ ಡೆಪ್ಯುಟಿ ಜನರಲ್ ಮೆನೇಜರ್ ಆಗಿ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾಗಿರುವಾಗ (2003ರಲ್ಲಿ) ಸ್ವಯಂ ನಿವೃತ್ತಿ ಪಡೆದರು. ಇವರು ಭಾರತದ ಎಲ್ಲಾ ಕಡೆ ಸಂಚರಿಸಿದ್ದಾರೆ.

ಪ್ರೊ। ಟಿ. ಎನ್.ಶ್ಯಾನುಭೋಗರು ತಂತ್ರಾಡಿ ಶ್ರೀನಿವಾಸ ಶ್ಯಾನುಭೋಗರ ನಾಲ್ಕನೆಯ ಪುತ್ರನಾಗಿ ತಂತ್ರಾಡಿಯಲ್ಲಿ ಜನಿಸಿದರು. ದಿ। ಟಿ. ಶ್ರೀನಿವಾಸ ಶ್ಯಾನು ಭೋಗರ ಕುಟುಂಬದ ಸದಸ್ಯರು ವಿದ್ಯಾವಂತರಾಗಿದ್ದು ಡಾಕ್ಟರ್, ಇಂಜಿನಿಯರ್ ಆಗಿ ಹೆಸರುವಾಸಿಯಾಗಿದ್ದಾರೆ. ಇವರು ಶಾರದಾ ಪತ್ರಿಕೆಯ ಮಹಾಪೋಷಕರು ಮತ್ತು ಸಿಂಡಿಕೇಟ್ ಬ್ಯಾಂಕಿನ ನಿವೃತ್ತ ವಿಭಾಗಾಧಿಕಾರಿ ಶ್ರೀ ಟಿ.ಆರ್ ಶ್ಯಾನುಭೋಗರ ಸಹೋದರ.

ಪ್ರೊ। ಟಿ.ಎನ್.ಶ್ಯಾನುಭೋಗರು ಶ್ರೀಮತಿ ಡಿ.ಸವಿತರೊಂದಿಗೆ ವಿವಾಹವಾಗಿ ಓರ್ವ ಪುತ್ರ ಹಾಗೂ ಈರ್ವರು ಪುತ್ರಿಯರನ್ನು ಹೊಂದಿದ್ದಾರೆ. ಇವರ ಮಗ ಟಿ.ಎನ್.ಪ್ರಸನ್ನ NITK ಸುರತ್ಕಲ್‌ನ ವಿದ್ಯಾರ್ಥಿಯಾಗಿದ್ದು TATA ಕನ್ಸಲ್ಟೆನ್ಸಿ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಮೆನೇಜರ್ ಆಗಿ ಕೆಲಸ ಮಾಡುತ್ತಿದ್ದಾರೆ. ಇವರಿಗೆ U.K.ಯಲ್ಲಿ 7 ವರ್ಷ ಕೆಲಸ ಮಾಡಿದ ಅನುಭವ ಇದೆ. ಇವರು Instrumentation Engineer ಆದ ಶ್ರೀಮತಿ ಸಹನಾರನ್ನು ಮದುವೆಯಾಗಿದ್ದು ಓರ್ವ ಪುತ್ರನನ್ನು ಹೊಂದಿದ್ದಾರೆ. ಹಿರಿಯ ಪುತ್ರಿ ಡಾ। ಪ್ರವೀಣಾ Oral Medicine ಮತ್ತು Radiologyಯಲ್ಲಿ M.D. ಪದವಿ ಪಡೆದಿದ್ದು ಡೆಂಟಲ್ ಕಾಲೇಜು ಬೆಳಗಾಂನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರು ಮೆಕ್ಯಾನಿಕಲ್ ಇಂಜಿನಿಯರ್ ಪ್ರಶಾಂತರನ್ನು ವಿವಾಹವಾಗಿದ್ದು ಸ್ವಂತ ಕೈಗಾರಿಕೆಯನ್ನು ಹೊಂದಿದ್ದಾರೆ. ಇವರ 2ನೇ ಪುತ್ರಿ ಶ್ರೀಮತಿ ಪುಷ್ಪಲತ ಕಂಪ್ಯೂಟರ್ ಇಂಜಿನಿಯರಿಂಗ್ ಮಾಡಿ ಇ.ಎಮ್.ಸಿ.ಜಡ್. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರ ಪತಿ ಅರುಣ್ ವಿಜಯ್ ಎನ್‌ಐಟಿ ನಾಗಪುರ ದಲ್ಲಿ ಶಿಕ್ಷಣ ಮುಗಿಸಿ ಇ.ಎಮ್.ಸಿ.ಜಡ್. ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಶ್ರೀಮತಿ ಪುಷ್ಪಲತ ದಂಪತಿಗಳಿಗೆ ಓರ್ವ ಪುತ್ರ ಹಾಗೂ ಓರ್ವ ಪುತ್ರಿಯಿದ್ದಾಳೆ.

ಪ್ರೊ। ಟಿ.ಎನ್.ಶ್ಯಾನು ಭೋಗರು ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘವನ್ನು ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಧನ ಸಹಾಯ ಮಾಡಿದುದನ್ನು ನೆನಪಿಸಿಕೊಂಡು ಸಂಘಕ್ಕೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ಶ್ರೀಯುತರು ಹಾಸನದ ಮಲೆನಾಡು ಇಂಜಿನಿಯರಿಂಗ್ ಕಾಲೇಜಿ ನಲ್ಲಿ ಬಿ.ಇ. (ಇಲೆಕ್ಟ್ರಿಕ್) ಪದವಿ ಪಡೆದು ಎನ್‌ಐಟಿ ವಾರಂಗಲ್‌ನಲ್ಲಿ ಎಮ್.ಟೆಕ್ ಮುಗಿಸಿದರು. ಇವರು ವಿವಿಧ ವೃತ್ತಿಪರ ಸಂಸ್ಥೆಗಳಾದ MISTE, FIE, MHMA (AIMA) MSESI, MISLE ಮತ್ತು MIEEE(USA) ಸದಸ್ಯರಾಗಿದ್ದು ದ.ಕ.ಜಿಲ್ಲೆಯ ಮುನ್ಸಿಪಲ್ ಕಾರ್ಪೋರೇಶನ್ನಿನ Energy Conservation ವಿಭಾಗದ ಸಲಹಾಧಿಕಾರಿಯಾಗಿದ್ದಾರೆ. ಯಕ್ಷಗಾನದ ಅಭಿಮಾನಿ ಕೂಡಾ ಆಗಿದ್ದ ಶ್ರೀಯುತರು ತಮ್ಮ ನೂತನ ಗೃಹ ಪ್ರವೇಶದ ಸಂದರ್ಭದಲ್ಲಿ ಪ್ರಾಯೋಜಕತ್ವ ವನ್ನು ನೀಡಿ ಶ್ರೀಶಾರದಾ ಹವ್ಯಾಸಿ ಕಲಾವಿದರು ಕುಂಜಿಬೆಟ್ಟು ಉಡುಪಿ ಇವರ ''ಜಾಂಬವತಿ ಕಲ್ಯಾಣ'' ಯಕ್ಷಗಾನ ಪ್ರದರ್ಶನ ಏರ್ಪಡಿಸಿದ್ದರು. ಸದ್ಯ ಉಡುಪಿ ಪೆರಂಪಳ್ಳಿಯಲ್ಲಿ ನಿರ್ಮಿಸಿದ ''ಶ್ರೀ ಸವಿತ''ದಲ್ಲಿ ಶ್ಯಾನುಭೋಗರು ವಾಸ್ತವ್ಯ ಇದ್ದಾರೆ.

ಶ್ರೀ ಟಿ.ಎನ್.ಶ್ಯಾನುಭೋಗರಿಗೆ ಶ್ರೀ ಶಾರದಾ ಹಾರ್ದಿಕ ಕೃತಜ್ಞತೆಗಳನ್ನು ಸಲ್ಲಿಸುತ್ತಾ ಅವರಿಗೂ ಅವರ ಕುಟುಂಬಿಕರಿಗೂ ಶ್ರೀಶಾರದಾ ಮಾತೆಯು ಸನ್ಮಂಗಳ ವುಂಟುಮಾಡಲಿ ಎಂದು ಪ್ರಾರ್ಥಿಸೋಣ.

## ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನ ಜೀರ್ಣೋದ್ಧಾರ

ಮೇ 26ರಂದು ನರಸಿಂಹ ಜಯಂತಿ ಹಾಗೂ ಮೇ 31ರಂದು ಪ್ರತಿಷ್ಠಾಪನಾ ದಿನ ರಂಗಪೂಜೆ ಕಾರ್ಯಕ್ರಮ ಸಾಂಗವಾಗಿ ನೆರವೇರಿತು. ಪಾದೆಬೆಟ್ಟು ದೇವಸ್ಥಾನಕ್ಕೆ ಸಂಬಂಧಪಟ್ಟ ಕುಟುಂಬಿಕರು, ಸಂಬಂಧಿಕರು ಹಾಗೂ ಗ್ರಾಮಸ್ಥರು ಈ ಸಂದರ್ಭದಲ್ಲಿ ದೇವರ ಅನುಗ್ರಹವನ್ನು ಪಡೆದರು.

ಜುಲೈ 2, 2010ರಂದು ಶ್ರೀ ವಿ. ಪೊದುವಾಳ್, ಕಾಸರಗೋಡು ಇವರ ನೇತೃತ್ವದಲ್ಲಿ ಶ್ರೀ ನಾಗಭೂಷಣ ಶರ್ಮ ಮತ್ತು ಪಡುಬಿದ್ರಿ ಬಾಲಗಣಪತಿ ದೇವಸ್ಥಾನದ ಮೊಕ್ತೇಸರರಾದ ಶ್ರೀ ಜಗದಾಭಿರಾಮ ಇವರ ಸಹಕಾರದೊಂದಿಗೆ ಪಾದೆಬೆಟ್ಟು ಕುಟುಂಬದ ಹಿರಿಯರಾದ ಕೊರೆಗಾಂವ್ ಸುಬ್ಬರಾವ್, ಪಿ. ಶ್ರೀನಿವಾಸ ಶರ್ಮ, ಪಿ. ಮುರಳೀಧರ ರಾವ್, ಪಿ. ರತ್ನಾಕರ ರಾವ್, ಪಿ. ದೇವರಾಯ ಶರ್ಮ ಮತ್ತು ಇನ್ನಿತರ ಕುಟುಂಬಸ್ಥರ ಹಾಗೂ ಬಂಧುಗಳ ಸಮ್ಮುಖದಲ್ಲಿ ದೇವಸ್ಥಾನದ ಜೀರ್ಣೋದ್ಧಾರದ ಬಗ್ಗೆ ತಾಂಬೂಲ ಪ್ರಶ್ನೆ ಕಾರ್ಯಕ್ರಮ ಜರಗಿತು. ಬಳಿಕ ಶ್ರೀಕ್ಷೇತ್ರದ ಸಮಸ್ಯೆಗಳು ಮತ್ತು ಪರಿಹಾರಗಳ ಬಗ್ಗೆ ಉಪಸ್ಥಿತರಿದ್ದವರು ಚಿಂತನೆಯನ್ನು ಮಾಡಿದರು. ತಂತ್ರಿಗಳಾದ ಬ್ರಹ್ಮಶ್ರೀ ವಾಗೀಶ ಶಾಸ್ತ್ರಿಯವರ ಸಲಹೆಯಂತೆ ಪ್ರಾಯಶ್ಚಿತ್ತಾದಿ ಕಾರ್ಯಕ್ರಮಗಳು ಹಾಗೂ ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಜೀರ್ಣೋದ್ಧಾರ ಪ್ರಾರಂಭಿಸುವುದೆಂದು ಆಡಳಿತ ಮೊಕ್ತೇಸರರಾದ ಶ್ರೀ ಬಿ. ಜಯರಾಮರಾವ್ ತಿಳಿಸಿರುವರು.

**ಸಂಪಾದಕ ಮಂಡಳಿ**

ವೈ. ಮೋಹನ ರಾವ್

ಎಚ್.ಎಸ್. ಶ್ಯಾನುಭಾಗ್

ಪ್ರಕಾಶ್ ರಾವ್ ಕೋಲ್ಪೆ

ಟಿ. ಸುರೇಶ ರಾವ್ ಅಂಬಾಗಿಲು

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ಅಥವಾ ಇತರ ಯಾವುದೇ ವಿಷಯಗಳ ಬಗ್ಗೆ ಅನಿಸಿಕೆಗಳನ್ನು ವಾಚಕರು ನಿಸ್ಸಂಕೋಚವಾಗಿ ಪತ್ರ ಮುಖೇನ ಸಂಪಾದಕ ಮಂಡಳಿಗೆ ತಿಳಿಸಬಹುದು.

-ಸಂ.

## ಚಿಂತನ

ಒಂದು ರೋಟರಿ ಸಮಾರಂಭ. ಸ್ಥಳೀಯ ರೋಟರಿಗೆ ಅಮೇರಿಕಾದ ಪ್ರತಿಷ್ಠಿತ ರೋಟರಿ ತಂಡದ ಭೇಟಿ. ಸಮಾರಂಭಕ್ಕೆ ಆಗಮಿಸಿದ ತಂಡದ ನಾಯಕ ಡಾ| ಮಿಲ್ಟನ್ ಟಾಮ್ ಭಾಷಣ ಮಾಡುತ್ತ ಹೀಗೆನ್ನುತ್ತಾರೆ ''ನಾನು ಭಾರತದ ರೋಟರಿ 318ರ ಸುಮಾರು 15-18 ಘಟಕಗಳನ್ನು ಭೇಟಿ ಮಾಡಿದೆ. ಎಲ್ಲ ರೋಟರಿ ಸದಸ್ಯರನ್ನು ಕಂಡು ಮಾತನಾಡಲು ಪ್ರಯತ್ನಿಸಿದ್ದೇನೆ. ಕೊನೆಗೂ ಪ್ರಶ್ನೆಯೊಂದು ನನ್ನಲ್ಲಿ ಇಂದು ಉಳಿದಿದೆ. ಅದೇನೆಂದರೆ ಇಲ್ಲಿನ ಸದಸ್ಯರು ನೂರಾರು ಡಾಲರ್‌ಗಳನ್ನು ತಮ್ಮಲ್ಲಿ ಹೊಂದಿಕೊಂಡು ಬ್ಯಾಂಕ್‌ಗಳಲ್ಲಿ ನಿರಖು ಠೇವಣಿ ಇಟ್ಟು ನಿಶ್ಚಿಂತೆಯಿಂದ ಇದ್ದಾರೆಯೇ? ಆದ್ದರಿಂದಲೆ ಇವರ ಮುಖದಲ್ಲಿ ಇಷ್ಟು ಕಾಂತಿ-ಶಾಂತಿ, ನಗು ಮೊದಲಾದುವುಗಳನ್ನು ಹೊಂದಿರುತ್ತಾರೆಯೇ? ಈ ಪ್ರಶ್ನೆಗೆ ಇಲ್ಲಿನ ಗಣ್ಯರು ನನಗೆ ಉತ್ತರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ'' ಎಂದು ಹೇಳಿ ಕುಳಿತರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸ್ಥಳೀಯ ಚರ್ಚಿನ ಧರ್ಮಗುರುಗಳು ಈ ಮಾತನ್ನು ಸ್ವೀಕಾರ ಮಾಡುತ್ತಾ ಉತ್ತರ ನಾನು ನೀಡುತ್ತೇನೆ, ವಿದೇಶದ ಜನರಲ್ಲಿ ಹಣವಿದ್ದವರು ಮಾತ್ರ ಸಂತೃಪ್ತರಾಗಿರುವಂತೆ ಕಾಣುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಹಣವಿದ್ದರೂ ಶಾಂತಿ ಇಲ್ಲದೆ ಅದಕ್ಕಾಗಿ ಇತರರ ನೆರವು ಬೇಡುತ್ತಾರೆ.

ಭಾರತದ ಜನರಲ್ಲಿ ಹಣವಿಲ್ಲದಿದ್ದರೂ ಮುಖದಲ್ಲಿ ಶಾಂತತೆ, ನಗುಮುಖ, ಸಂತೃಪ್ತ ಭಾವನೆ ಖಂಡಿತಾ ಇದೆ. ಇದು ಇಲ್ಲಿನ ಮಣ್ಣಿನ ಗುಣ, ಅಲ್ಲದೆ ಇದೇ ನಾವು ಚಿಕ್ಕಂದಿನಿಂದ ಕಲಿತು ಬಂದ ಸಂಸ್ಕೃತಿ. ಈ ವಿಚಾರವನ್ನು ನಮ್ಮ ಗಣ್ಯ ಅತಿಥಿಗಳು ಅರ್ಥ ಮಾಡಿಕೊಳ್ಳುತ್ತಾರೆಂದು ತಿಳಿದುಕೊಳ್ಳುತ್ತೇನೆ ಎಂದು ಹೇಳಿ ತನ್ನ ಮಾತು ಮುಗಿಸಿದರು.

ಇಲ್ಲಿ ಡಾ| ಮಿಲ್ಟನ್ ಟಾಮ್ ಕೇಳಿದ ಪ್ರಶ್ನೆ ಹಾಗೂ ಅದಕ್ಕೆ ನಮ್ಮ ಧರ್ಮಗುರುಗಳು ನೀಡಿದ ಉತ್ತರ ಎರಡೂ ಚಿಂತಿಸಬೇಕಾದ ವಿಚಾರವಾಗಿದೆ. ನಮ್ಮ ಮರಿಪೀಳಿಗೆಯಲ್ಲಿ ಇದೀಗ ಮರೆಯಾಗುತ್ತಿರುವ ಈ ಸಂಸ್ಕೃತಿ, ಸೌಜನ್ಯತೆಯನ್ನು ನಾವು ಉಳಿಯುವಂತೆ ಮಾಡಬೇಕಲ್ಲವೇ?

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಕೃಷ್ಣನ ಈ ಮಾತುಗಳನ್ನು ಕೇಳಿದ ಗೋಪಿಯರ ವಿರಹ ತಾಪ ಮರೆಯಾಯಿತು. ಅವನ ಮೇಲೆ ಅನನ್ಯ ಪ್ರೀತಿ ಉಕ್ಕಿ ಹರಿಯಿತು. ಆಗ ಯೋಗೇಶ್ವರನಾದ ಶ್ರೀಕೃಷ್ಣನು ಮಹಾರಾಸ ಕ್ರೀಡೆಗೆ ಮುಂದಾದನು. ಇಬ್ಬಿಬ್ಬರು ಗೋಪಿಯರಿಗೆ ಒಬ್ಬೊಬ್ಬ ಕೃಷ್ಣನಾಗಿ ಏಕಕಾಲದಲ್ಲಿ ಅವರೊಡನೆ ಕುಣಿಯಲಾರಂಭಿಸಿದನು. ಇಬ್ಬಿಬ್ಬರಿಗೂ ಕೃಷ್ಣ ತಮ್ಮ ಸಂಗಡವೇ ಇರುವ ತೃಪ್ತಿ, ಆನಂದವುಂಟಾಯಿತು. ಈ ರಾಸಲೀಲೆಯನ್ನು ನೋಡಲು ದೇವತೆಗಳು ತಂತಮ್ಮ ವಿಮಾನಗಳಲ್ಲಿ ಬಂದು ಆಕಾಶದಲ್ಲಿ ನೆರೆದರು. ಈ ವಿಮಾನಗಳಿಂದ ವೃಂದಾವನದ ಆಕಾಶ ಮುಚ್ಚಿಹೋಯಿತು. ವಿದ್ಯಾಧರ, ಗಂಧರ್ವರೆಲ್ಲ ಮೃದಂಗಾದಿ ಮಂಗಳ ವಾದ್ಯಗಳನ್ನು ಬಾರಿಸಿದರು, ಹಾಡಿದರು. ದೇವತೆಗಳೆಲ್ಲ ರಾಸಕ್ರೀಡೆಯ ಮೇಲೆ ಹೂಮಳೆಗರೆದರು. ಇಷ್ಟಾದ ಮೇಲೆ ಭಗವಂತನು ಇನ್ನೊಂದು ಚಮತ್ಕಾರವನ್ನು ತೋರಿಸಿದನು. ಅಲ್ಲಿದ್ದಷ್ಟು ಗೋಪಿಯರಿಗೆ ಒಬ್ಬೊಬ್ಬ ಕೃಷ್ಣನಂತೆ ನೂರಾರು ಕೃಷ್ಣರಾಗಿ ನಲಿದಾಡಿದನು. ಈ ಅದ್ಭುತ ರಾಸಲೀಲೆಯನ್ನು ನೋಡಿದ ದೇವತೆಗಳು ಪರಮಾತ್ಮನ ಪರಮಾದ್ಭುತ ಮಹಿಮೆಗೆ ಬೆರಗಾಗಿ ಅವನ ಸ್ತೋತ್ರ ಮಾಡಿದರು. ಅನಂತರ ಗೋಪಾಲ ಚೂಡಾಮಣಿಯೂ, ಗೋಪಿಯರೂ ಜಲಕ್ರೀಡೆಯಾಡಿದರು. ಅನಂತರ ಉಪವನದಲ್ಲಿ ವಿಹರಿಸಿದರು. ಇಲ್ಲಿ ಶ್ರೀಕೃಷ್ಣನು ಪರಸ್ತ್ರೀ ಸಂಗ ಮಾಡಿದನೆಂದು ಯಾರೂ ಭಾವಿಸಬಾರದು. ಯಾಕೆಂದರೆ ಗೋಪಿಯರೆಲ್ಲ ಆತ್ಮಸ್ವರೂಪದಿಂದಲೇ ಪರಮಾತ್ಮನ ಸಾಯುಜ್ಯದಲ್ಲಿ ಸೇರಿಹೋಗಿದ್ದರು. ಲೌಕಿಕವಾದ ಸಂಬಂಧಗಳನ್ನು ಅಲೌಕಿಕ ಸ್ತರದಲ್ಲಿ ಅಳೆಯುವುದು ತಪ್ಪಾಗುತ್ತದೆ. ಶ್ರೀಕೃಷ್ಣನ ರಾಸಲೀಲೆ ಜೀವನ್ಮುಕ್ತರೊಡನೆ ಮಾಡಿದ ಸಂಗವೆಂದು ತಿಳಿಯಬೇಕಾಗುತ್ತದೆ. ಮಹಾತ್ಮರ ಉಪದೇಶದಂತೆ ನಡೆಯಬೇಕು. ಕೇವಲ ಕ್ವಚಿತ್ತಾಗಿ ಅವರು ಆಚರಿಸಿದಂತೆ ಆಚರಿಸಬೇಕು. ಶಂಕರನು ಹಾಲಾಹಲವನ್ನು ಕುಡಿದನೆಂದು ಸಾಮಾನ್ಯ ಜೀವಿಗಳು ಹಾಗೆ ಮಾಡಬಾರದು.

ಹೀಗೆ ಶ್ರೀಕೃಷ್ಣನು ರಾತ್ರಿಯೆಲ್ಲ ರಾಸಲೀಲೆಯನ್ನಾಡಿದನು. ಬ್ರಾಹ್ಮೀ ಮುಹೂರ್ತದಲ್ಲಿ ಅವರನ್ನೆಲ್ಲ ತಂತಮ್ಮ ಮನೆಗಳಿಗೆ ಹೋಗುವಂತೆ ಆಜ್ಞಾಪಿಸಿದನು. ಗೋಪಾಂಗನೆಯರು ಮನಸ್ಸಿಲ್ಲದ ಮನಸ್ಸಿನಿಂದ ತಮ್ಮ ಮನೆಗಳಿಗೆ ತೆರಳಿದರು. ಸರ್ವಾಂತರ್ಯಾಮಿ ಪರಮಾತ್ಮನಿಂದ ಅವರೆಲ್ಲ ಆತ್ಮರಸವನ್ನು ಪಾನಮಾಡಿ ಬಂದದ್ದರಿಂದ ಅವರನ್ನು ಯಾರೂ ನಿಂದಿಸಲಿಲ್ಲ. ಎಲ್ಲರೂ ಆನಂದದಿಂದಲೇ ಅವರನ್ನು ಬರಮಾಡಿಕೊಂಡರು.

### ಅಧ್ಯಾಯ-೫

ಒಮ್ಮೆ ಶಿವರಾತ್ರಿಯ ಸಂದರ್ಭದಲ್ಲಿ ನಂದನು ಅಂಬಿಕಾವನಕ್ಕೆ ಯಾತ್ರೆಯನ್ನೇರ್ಪಡಿಸಿದನು. ರಾಮ, ಕೃಷ್ಣ ಮತ್ತು ಗೋಪಾಲಕರೂ ಸೇರಿ ಗಾಡಿಗಳಲ್ಲಿ ಅಂಬಿಕಾ ವನಕ್ಕೆ ಹೋದರು. ಅಲ್ಲಿ ಆರಾಧ್ಯ ದೇವತೆಯಾದ ಅಂಬಿಕೆಯನ್ನು ವಿವಿಧೋಪಚಾರಗಳಿಂದ ಪೂಜಿಸಿದರು. ಭಗವಂತನಾದ ಶಂಕರನ ಅನುಗ್ರಹಕ್ಕಾಗಿ ನಂದ ಮೊದಲಾದ ಗೋಪಾಲಕರು ಉಪವಾಸ ವ್ರತದಲ್ಲಿದ್ದರು. ನಂದನು ಗವಾದಿ ದಾನಗಳಿಂದ ಬ್ರಾಹ್ಮಣರನ್ನು ಸಂತೋಷಪಡಿಸಿದನು. ಅಂದಿನ ರಾತ್ರಿ ಅವರೆಲ್ಲ ಸರಸ್ವತೀ ನದಿ ದಡದಲ್ಲೇ ಮಲಗಿದರು. ಆ ಕ್ಷೇತ್ರದಲ್ಲಿ ಒಂದು ಬೃಹತ್ಕಾಯದ ಹೆಬ್ಬಾವಿದ್ದಿತು. ಅದು ಮಲಗಿ ನಿದ್ರಿಸುತ್ತಿದ್ದ ನಂದನನ್ನು ಹಿಡಿದು ನುಂಗಲಾರಂಭಿಸಿತು. ಆಗ ನಂದನು ಗಟ್ಟಿಯಾಗಿ ಕೂಗಿಕೊಂಡನು. ''ಮಗು ಕೃಷ್ಣ, ಬೇಗನೇ ಬಾ. ನನ್ನನ್ನು ಕಾಪಾಡು ಈ ಹೆಬ್ಬಾವು ನನ್ನನ್ನು ನುಂಗುತ್ತಿದೆ. ನಿನಗೆ ಶರಣಾಗಿದ್ದೇನೆ ಮಗನೆ'' ಎಂದು ಅವನ ಕೂಗನ್ನು ಕೇಳಿ ಗೊಲ್ಲರೆಲ್ಲ ಎಚ್ಚೆತ್ತರು. ಅವರು ಕೂಡಲೆ ಬೆಂಕಿಯ ಕೊಳ್ಳಿಗಳಿಂದ ಹೆಬ್ಬಾವಿಗೆ ಹೊಡೆದರು. ಆದರೆ ಕೊಳ್ಳಿಗಳು ಸುಡುತ್ತಿದ್ದರೂ ಹೆಬ್ಬಾವು ನಂದನನ್ನು ನುಂಗುತ್ತಲೇ ಇತ್ತು. ಆಗ ಅಲ್ಲಿಗೆ ಓಡಿಬಂದ ಶ್ರೀಕೃಷ್ಣನು ಆ ಹಾವನ್ನು ತನ್ನ ಕಾಲಿನಿಂದ ಮುಟ್ಟಿದನು. ಭಗವತ್ಪಾದಸ್ಪರ್ಶವಾಗುತ್ತಲೇ ಆ ಹಾವಿನ ಪಾಪಗಳೆಲ್ಲ ಪರಿಹಾರವಾದವು. ಆ ಜೀವದ ಸರ್ಪರೂಪವು ಹೋಗಿ ಒಬ್ಬ ವಿದ್ಯಾಧರನ ರೂಪ ಬಂತು. ಬಂಗಾರದ ಆಭರಣಾದಿಗಳಿಂದ ಶೋಭಿಸುತ್ತಿದ್ದ ಆ ವಿದ್ಯಾಧರನನ್ನು ಜಗದೀಶನು ಕೇಳಿದನು, ''ಇಷ್ಟೊಂದು ಅದ್ಭುತ ಕಾಂತಿಯಿರುವ ನೀನು ಯಾರು? ನಿನಗೆ ಇಂತಹ ನೀಚ ಜನ್ಮ ಯಾಕೆ ಬಂದಿತ್ತು?'' ಅದಕ್ಕೆ ವಿದ್ಯಾಧರನೆಂದನು ''ನಾನೊಬ್ಬ ವಿದ್ಯಾಧರ. ನನ್ನ ಹೆಸರು ಸುದರ್ಶನ. ಐಶ್ವರ್ಯಸಂಪನ್ನನಾದ ನಾನು ಇಷ್ಟಬಂದಂತೆ ವಿಮಾನದಲ್ಲಿ ಕುಳಿತು ಸಂಚರಿಸುತ್ತಿದ್ದೆ. ಒಮ್ಮೆ ಅಂಗಿರಸಗೋತ್ರದ ಅತ್ಯಂತ ಕುರೂಪಿಗಳಾದ ಕೆಲವು ಋಷಿಗಳನ್ನು ನೋಡಿದೆ. ರೂಪಮದದಿಂದ ಕುರುಡನಾಗಿದ್ದ ನಾನು ಅವರನ್ನು ಕಂಡು ನಕ್ಕುಬಿಟ್ಟೆ. ಇದರಿಂದ ಕುಪಿತರಾದ ಅವರು ನನಗೆ ಹಾವಾಗುವಂತೆ ಶಾಪಕೊಟ್ಟರು. ಇದು ನನ್ನದೇ ಪಾಪದ ಫಲ. ಆದರೂ ಈ ಶಾಪದಿಂದ ನನಗೆ ಒಳಿತೇ ಆಯಿತು. ಪರಮೇಶ್ವರನಾದ ನಿನ್ನ ಪಾದಸ್ಪರ್ಶ ನನಗಾದದ್ದು ಸಾಮಾನ್ಯ ಭಾಗ್ಯವೇ? ಆದುದರಿಂದ ಆ ಶ್ರೇಷ್ಠ ಮಹರ್ಷಿಗಳು ನನ್ನ ಮೇಲೆ ಅನುಗ್ರಹವನ್ನೇ ಮಾಡಿದಂತಾಗಿದೆ''. ಹೀಗೆಂದ ಸುದರ್ಶನನು ಭಗವಂತನನ್ನು ಬಹುವಿಧವಾಗಿ ಸ್ತುತಿಸಿ, ಅವನಿಗೆ ಸಾಷ್ಟಾಂಗವೆರಗಿ ತನ್ನ ಲೋಕಕ್ಕೆ ಹೊರಟುಹೋದನು. ವೃಂದಾವನವಾಸಿಗಳೆಲ್ಲ ಶ್ರೀಕೃಷ್ಣನ ಮಹಿಮೆಯನ್ನು ಕಂಡು ವಿಸ್ಮಿತರಾದರು. ವ್ರತ ಮುಗಿಸಿಕೊಂಡು ಅವರೆಲ್ಲ ವೃಂದಾವನಕ್ಕೆ ಹಿಂದಿರುಗಿದರು.

ಇನ್ನೊಂದು ದಿನ ರಾತ್ರಿ ರಾಮ, ಕೃಷ್ಣರು ವೃಂದಾವನದಲ್ಲಿ ಗೋಪಸ್ತ್ರೀಯರೊಂದಿಗೆ ವಿಹರಿಸುತ್ತಿದ್ದರು. ಆಗ ಶಂಖಚೂಡನೆಂಬ ಕುಬೇರನ ಅನುಚರನೊಬ್ಬ ಅಲ್ಲಿಗೆ ಬಂದನು. ಅವನು ರಾಮ, ಕೃಷ್ಣರ ಭಯವಿಲ್ಲದೆ ಗೋಪಿಕೆಯರನ್ನು ಎತ್ತಿಕೊಂಡು ಉತ್ತರ ದಿಕ್ಕಿಗೆ ಓಡಿದನು. ಯುವತಿಯರು ದೈನ್ಯದಿಂದ ಅಳುತ್ತಿದ್ದರು. ರಾಮ, ಕೃಷ್ಣರು ಕೈಯಲ್ಲಿ ಶಾಲವೃಕ್ಷಗಳನ್ನು ಎತ್ತಿಕೊಂಡು ''ಹೆದರಬೇಡಿರಿ'' ಎನ್ನುತ್ತ ಅವನ ಹಿಂದಿನಿಂದ ಓಡಿದರು. ಅವರಿಬ್ಬರು ಯಮ ರೂಪರಾಗಿ ಬರುವುದನ್ನು ಕಂಡ ಯಕ್ಷನು ಹೆದರಿ ಆ ಹುಡುಗಿಯರನ್ನು ಅಲ್ಲೆ ಬಿಟ್ಟು ಪಲಾಯನ ಮಾಡಿದನು. ಬಲರಾಮನು ಅವರ ರಕ್ಷಣೆಗಾಗಿ ಅಲ್ಲಿ ನಿಂತನು. ಆದರೆ ಕೃಷ್ಣನು ಶಂಖಚೂಡನ ಶಿರೋಮಣಿಯನ್ನು ಕಿತ್ತುಕೊಳ್ಳಬೇಕೆಂದು ಅವನು ಓಡಿದಲ್ಲೆಲ್ಲ ಹಿಂಬಾಲಿಸಿದನು. ಕೊನೆಗೆ ಅವನು ಸಿಕ್ಕಿಬೀಳಲು ಕೃಷ್ಣನು ಅವನ ತಲೆಗೆ ತನ್ನ ಮುಷ್ಟಿಯಿಂದ ಬಲವಾಗಿ ಗುದ್ದಿದನು. ಅವನ ತಲೆ ಒಡೆದೇ ಹೋಯಿತು. ಅವನ ತಲೆಯ ಮೇಲಿದ್ದ ಮಣಿಯನ್ನು ಕಿತ್ತು ತಂದು ಅದನ್ನು ತನ್ನಣ್ಣನಾದ ಬಲರಾಮನಿಗೆ ಕೊಟ್ಟನು. ಗೋಪಿಕೆಯರು ಬೆರಗುವಟ್ಟು ಈ ಪರಾಕ್ರಮವನ್ನು ನೋಡಿದರು.

(ಮುಂದುವರಿಯುವುದು)

## ಹೊಸ ಬೆಳಕು

**ನಲ್ನುಡಿ :**

**ಅವತು ಮಾಂ ಅವತು ವಕ್ತಾರಂ**

ಅಂದರೆ ನನ್ನನ್ನು ರಕ್ಷಿಸು ಹೇಳುವವನನ್ನು ರಕ್ಷಿಸು.

**ಪುಸ್ತಕ ಪರಿಚಯ :**

''ಕಾಂತ''

*ಲೇಖಕರು :* ಎಂ. ವ್ಯಾಸ

*ಪ್ರಕಾಶಕರು :* ಶ್ರೀನಿವಾಸ ಪುಸ್ತಕ ಪ್ರಕಾಶನ ನಂ.164/ಎ, ಬಸವನಗುಡಿ, ಬೆಂಗಳೂರು

*ಬೆಲೆ :* ರೂ.90/-

ಡಾ| ವರದರಾಜ ಚಂದ್ರಗಿರಿ ಕೃತಿಯಲ್ಲಿ 'ಎರಡು ಮಾತು' ಇಲ್ಲಿ ಹೇಳಿದಂತೆ - ವ್ಯಾಸರ ಕತೆಗಳನ್ನು ರಕ್ಷಿಸಿ, ಸಂಕಲಿಸಿ, ಸಾಹಿತ್ಯಲೋಕಕ್ಕೆ ಸಮರ್ಪಿಸಬೇಕು ಎನ್ನುವುದು ಅವರ ಪತ್ನಿ ಶ್ರೀಮತಿ ಶಶಿಕಲಾ, ಮಕ್ಕಳಾದ ಡಾ| ತೇಜಸ್ವಿ, ಕೃಪ, ಪ್ರತಿಮಾ ಮತ್ತು ಬಂಧುಗಳಾದ ನಮ್ಮೆಲ್ಲರ ಉದ್ದೇಶವಾಗಿದ್ದು, ಹಂತ ಹಂತವಾಗಿ ವ್ಯಾಸರ ಎಲ್ಲ ಬರಹಗಳನ್ನೂ ವಿವಿಧ ಪ್ರಕಾಶಕರ ನೆರವಿನಿಂದ ಹೊರತರಲಿದ್ದೇವೆ. ಕನ್ನಡ ಓದುಗ ವರ್ಗ ಮತ್ತೆ ವ್ಯಾಸರನ್ನು ಓದಬೇಕು, ಚರ್ಚಿಸಬೇಕು ಎನ್ನುವುದು ನಮ್ಮ ಆಶಯ. ತಮ್ಮ ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ.

ಕೃತಿಯಲ್ಲಿ 'ಕಾಂತ' ಓದುವ ಮೊದಲು ಇಲ್ಲಿ ಡಾ| ನಾ. ಮೊಗಸಾಲೆ ಹೇಳುತ್ತಾರೆ - ವ್ಯಾಸರು ಈಗ ನಮ್ಮೊಂದಿಗೆ ಭೌತಿಕವಾಗಿ ಇಲ್ಲ, ನಿಜ. ಆದರೆ ಅವರು ಅನಾವರಣಗೊಳಿಸಿದ ಮನೋಚಿತ್ರಗಳಲ್ಲಿ ನಾವು ಸದಾ ಇದ್ದು ಅವು ನಮ್ಮ ಮನಃ ಪಟಲವನ್ನು ಕಾಡುತ್ತಲೇ ಇರುತ್ತವೆ. ಅವರ ಯಾವುದಾದರೂ ಒಂದು ಕತೆಯನ್ನು ಓದಿದಾಗ, ಓದುವ ಪ್ರತಿಯೊಬ್ಬನಿಗೂ ಆ ಕತೆಯ ಒಂದು ಪಾತ್ರವಾಗಿ ತಾನು ಇರುವುದು ಹೌದೇ ಎಂಬ ಸಂಶಯ ಅಥವಾ ಅದು ತನ್ನ ನೆರಳಾಗಿ ಆ ಪಾತ್ರ ಇದೆಯೋ ಎಂಬ ಗುಮಾನಿ ಕಾಡದೇ ಇರುವುದು ಸಾಧ್ಯವಿಲ್ಲ. ಇಂಥ ಕತೆಗಳ ಅಂಥ ಪಾತ್ರಗಳು ಈ ಜಗತ್ತಿನಲ್ಲಿ ಇರುವಷ್ಟರ ತನಕ ವ್ಯಾಸರ ಕತೆಗಳಿಗೆ ಸಾವಿಲ್ಲ. ಸಾವಿಲ್ಲದಂಥ ಇಂಥ ಪಾತ್ರ,ಚಿತ್ರಣಗಳನ್ನು ನಮ್ಮ ಇದಿರು ಬಿಟ್ಟು ಹೋದ ವ್ಯಾಸರಿಗೆ ನಾವು ಕೃತಜ್ಞರು ಎನ್ನುವುದಷ್ಟೇ ನಾವು ಈಗ ಅವರಿಗೆ ಸಲ್ಲಿಸಬಹುದಾದ ಗೌರವ ಎಂದು ಹೇಳುವುದೂ ಕೂಡಾ, ನಮ್ಮ ಕರ್ತವ್ಯ ಎಂದು ನಾನು ನಂಬಿದ್ದೇನೆ.

''ಮನುಷ್ಯ ಸಂಬಂಧಗಳ ಸ್ವರೂಪ-ವಿರೂಪ-ಕುರೂಪಗಳು ಯಾವಾಗಲೂ ನನ್ನ ಮನಸ್ಸನ್ನು ತಟ್ಟುತ್ತಲೇ ಇರುತ್ತವೆ. ಆದರಿಂದಾಗಿಯೇ ನನ್ನ ವಸ್ತು ಯಾವಾಗಲೂ ಮನುಷ್ಯನೇ'' ಎನ್ನುವ ವ್ಯಾಸರು ತಮ್ಮ ಕತೆಗಳಿಗಾಗಿ ಸೃಷ್ಟಿಸಿಕೊಂಡ ಊರು ದುರ್ಗಾಪುರ. ವ್ಯಾಸರು ವಿಕ್ಷಿಪ್ತ ಕತೆಗಾರ ಎಂದು ಕೆಲವರಿಗೆ ಅನ್ನಿಸಬಹುದು. ವಿಕ್ಷಿಪ್ತ ಎನ್ನುವ ಪದಕ್ಕೆ ಪರಿತ್ಯಕ್ತ ಎಂಬ ಅರ್ಥವೂ ಇದೆ. ಸಾಹಿತ್ಯಲೋಕ ತನ್ನನ್ನು ಪರಿತ್ಯಜಿಸಿದೆ, ಅಲಕ್ಷ್ಯಿಸಿದೆ ಎಂಬ ಕೊರಗು ವ್ಯಾಸರಲ್ಲಿರಲಿಲ್ಲ. ತಮ್ಮ ಕೃತಿಗಳನ್ನು ಕುರಿತ ಸಮಕಾಲೀನರ ಅನಾದರವನ್ನು ಭವಭೂತಿಯಂತೆ ಆತ್ಮವಿಶ್ವಾಸದಿಂದ ಅಲಕ್ಷ್ಯಿಸಿದ ಲೇಖಕ ಎಂ. ವ್ಯಾಸ ಎಂದು ಮುರಳೀಧರ ಉಪಾಧ್ಯ ಹಿರಿಯಡಕ ಹೇಳುತ್ತಾರೆ.

– ವೈ. ಮೋಹನ ರಾವ್.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ಅಂಬಲಪಾಡಿ ಕೃಷ್ಣ ರಾವ್, ಡಾ| ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ| ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಪಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ಡಾ| ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ.ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ| ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ| ತಂತ್ರಾಡಿ ನಾರಾಯಣ ಶ್ಯಾನುಭಾಗ್.

# ಶ್ರೀಶಾರದಾ ಸೊಸೈಟಿಯು ಬ್ಯಾಂಕ್ ಆಗಿ ಉನ್ನತಿ ಹೊಂದಲಿ : ಕೆ. ವೇಣುಗೋಪಾಲರಾವ್

ಶ್ರೀಶಾರದಾ ಸೊಸೈಟಿಯು ಸ್ಥಾಪನೆಯಾಗಿ 9 ವರ್ಷ ಕಳೆದು 10ನೇ ವರ್ಷದಲ್ಲಿ ಕುಕ್ಕಿಕಟ್ಟೆಯಲ್ಲಿ ಶಾಖೆಯನ್ನು ಆರಂಭಿಸಿ ಅಭಿವೃದ್ಧಿ ಹೊಂದಿರುತ್ತದೆ. ಇಂದು ಎಲ್ಲರ ಬಾಯಿಯಲ್ಲಿಯೂ ಸೊಸೈಟಿ ಎಂಬ ಶಬ್ದವು ಬ್ಯಾಂಕ್ ಆಗಿರುತ್ತದೆ. ಇದು ನಿಜವೇ ಆಗಿ ನಮ್ಮ ಸೊಸೈಟಿಯು ಶ್ರೀಶಾರದಾ ಕೊ-ಅಪರೇಟಿವ್ ಬ್ಯಾಂಕ್ ಆಗಿ ಅಭಿವೃದ್ಧಿ ಹೊಂದಲಿ ಎಂದು ಶ್ರೀಶಾರದಾ ಕೋ-ಅಪರೇಟಿವ್ ಸೊಸೈಟಿಯ ಕಾರ್ಯದರ್ಶಿಯಾಗಿದ್ದು ನಿವೃತ್ತಿ ಹೊಂದುತ್ತಿರುವ ಕೆ. ವೇಣುಗೋಪಾಲರಾವ್ ತನಗೆ ನೀಡಲಾದ ಸನ್ಮಾನಕ್ಕೆ ಉತ್ತರಿಸುತ್ತಾ ಹೇಳಿದರು.



ನಮ್ಮ ಸಮಾಜದ ಕೆಲವು ಯುವಕರು ಸೇರಿಕೊಂಡು ಸೊಸೈಟಿಯನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಇದ್ದ ತೊಂದರೆಗಳು ಅದನ್ನು ಮೀರಿ 3ನೇ ವರ್ಷದಿಂದ 10% ಲಾಭಾಂಶ ನೀಡಲಾಗಿದ್ದು ಇದಕ್ಕೆ ಈಗಿನ ಅಧ್ಯಕ್ಷರಾದ ಎಮ್. ಸದಾನಂದ ರಾಯರು, ಸ್ಥಾಪಕ ಅಧ್ಯಕ್ಷರಾದ ಡಾ। ವಿಠಲ ರಾಯರು ಹಾಗೂ ಹಿಂದಿನ ಮತ್ತು ಈಗಿನ ನಿರ್ದೇಶಕ ಮಂಡಳಿ ಮತ್ತು ಅವಿರತವಾಗಿ ದುಡಿಯುತ್ತಿರುವ ಸಿಬಂದಿ ವರ್ಗ ಎಲ್ಲರ ಸಹಕಾರದಿಂದ ಆಗಿದೆ ಹೊರತು ನನ್ನೊಬ್ಬನಿಂದ ಅಲ್ಲ ಎಂದು ವಿನಯಪೂರ್ವಕವಾಗಿ ನುಡಿದರು.

ಶ್ರೀಮತಿ ಸುನೀತಾ ಹಾಗೂ ಶ್ರೀಮತಿ ಭಾರತಿಯವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾದ ಸಭೆಯಲ್ಲಿ ಅಧ್ಯಕ್ಷರಾದ ಎಮ್. ಸದಾನಂದ ರಾಯರು ಎಲ್ಲರನ್ನೂ ಸ್ವಾಗತಿಸುತ್ತಾ ಹಣಕಾಸು ಸಂಸ್ಥೆಗಳು ದಿವಾಳಿ ಹೊಂದುತ್ತಿದ್ದ ಸಂದರ್ಭ, ನಮ್ಮ ಸಮಾಜದವರೊ ಸೊಸೈಟಿಯನ್ನು ಪ್ರಾರಂಭಿಸಲು ಸಾಧ್ಯವಾಗಬಹುದೇ ಎಂಬ ಅನುಮಾನದಲ್ಲಿದ್ದ ಸಮಯದಲ್ಲಿ ಆಗತಾನೇ ಸಿಂಡಿಕೇಟ್ ಬ್ಯಾಂಕಿನಿಂದ ಸ್ವಯಂ ನಿವೃತ್ತಿ ಹೊಂದಿದ್ದ ಅನುಭವಿ ಕೆ. ವೇಣುಗೋಪಾಲ ರಾಯರು ಕಾರ್ಯದರ್ಶಿಯಾಗಲು ಒಪ್ಪಿದರು. ಆಗ ಡಾ। ವಿಠಲ ರಾಯರ ನೇತೃತ್ವದಲ್ಲಿ ತಂಡವಾಗಿ ಪ್ರವರ್ತಕರಾಗಿದ್ದ ಮತ್ತು ನಿರ್ದೇಶಕ ಮಂಡಳಿಯವರೂ ಕುಂದಾಪುರದಿಂದ ಮಂಗಳೂರಿನ ತನಕ ಪಾಲು ಬಂಡವಾಳ ಸಂಗ್ರಹಿಸಿದ ವಿಷಯವನ್ನು ಪ್ರಸ್ತಾಪಿಸಿದರು. ಹಾಗೆಯೇ ನಿಸ್ವಾರ್ಥವಾಗಿ ದುಡಿಯುವ ಸಿಬಂದಿ ವರ್ಗದವರ ಸೇವೆಯನ್ನು ಕೊಂಡಾಡಿದರು. ಅಂತಹವರಲ್ಲಿ ಒಬ್ಬರಾಗಿರುವ ಕೆ. ವೇಣುಗೋಪಾಲರಾಯರು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಉತ್ತಮ ತರಬೇತಿ ನೀಡಿದ್ದಾರೆಂದು ತಿಳಿಸಿದರು. ಹಾಗೆಯೇ ಇನ್ನು ಮುಂದೆಯೂ ಅವರ ಸೇವೆಯು ಸೊಸೈಟಿಯ ಬೆಳವಣಿಗೆಗೆ ಬೇಕಾಗಿದೆಯೆಂದು ತಿಳಿಸಿದರು.


ಬ್ಯಾಂಕಿನ ಪ್ರವರ್ತಕರಲ್ಲೊಬ್ಬರಾಗಿದ್ದ ಶ್ರೀ ಕೃಷ್ಣಕುಮಾರ್‌ರಾವ್, ಮಟ್ಟು ಮಾತನಾಡಿ ಎಮ್. ಸದಾನಂದರಾಯರ ಜೊತೆಗೂಡಿ ಪ್ರತಿದಿನವೆಂಬಂತೆ ಕುಂದಾಪುರದಿಂದ ಮಂಗಳೂರಿನ ತನಕ ಪಾಲುಬಂಡವಾಳ ಸಂಗ್ರಹಿಸಿ ಸ್ಥಾಪನೆಯಾದ ಈ ಸೊಸೈಟಿಗೆ ಕೆ. ವೇಣುಗೋಪಾಲರಾಯರು ಬೆನ್ನೆಲುಬಾಗಿ ನಿಂತರು. ಹಾಗೆಯೇ ಪ್ರಫುಲ್ಲಚಂದ್ರರಾಯರು, ಡಾ। ವಿಠಲರಾಯರು,ಇನ್ನಿತರ ನಿರ್ದೇಶಕ ಮಂಡಳಿಯವರು ಹಾಗೂ ಎಲ್ಲ ಸಿಬಂದಿ ವರ್ಗದವರ ಸಹಕಾರದಿಂದ 3ನೇ ವರ್ಷದಿಂದಲೇ ಲಾಭಾಂಶ ನೀಡುವಂತೆಯೂ, ಶಾಖೆ ತೆರೆದು ಉತ್ತಮ ರೀತಿಯಿಂದ ಬ್ಯಾಂಕ್ ಬೆಳವಣಿಗೆ ಹೊಂದಿದೆ. ನಮ್ಮ ಸಮಾಜದ ಎಲ್ಲರ ಆಶಯದಂತೆ ಈ ಬ್ಯಾಂಕ್ ಉನ್ನತಿಯನ್ನು ಹೊಂದಲಿ ಎಂದು ಹಾಗೆಯೇ ನಿವೃತ್ತಿ ಹೊಂದುತ್ತಿರುವ ಕಾರ್ಯದರ್ಶಿಯವರಿಗೆ ಅಭಿನಂದನೆ ಸಲ್ಲಿಸಿದರು. ಉಪಾಧ್ಯಕ್ಷರಾದ ಶ್ರೀ ಸಿ.ಎಸ್. ರಾಯರು ಶ್ರೀಶಾರದಾ ಕೋ-ಅಪರೇಟಿವ್ ಸೊಸೈಟಿಯ ಉದ್ಘಾಟನೆಯ ಸಂದರ್ಭದಲ್ಲಿ ಆಗ ಕಾರ್ಪೋರೇಶನ್ ಬ್ಯಾಂಕಿನ ಡಿಜಿಎಮ್ ಆಗಿದ್ದ ತಾನು ಮುಖ್ಯ ಅತಿಥಿಯಾಗಿದ್ದು ಈಗ ಸೊಸೈಟಿ ಬೆಳವಣಿಗೆ ಹೊಂದುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿ ಕೆ. ವೇಣುಗೋಪಾಲರಾಯರ ಕಾರ್ಯದಕ್ಷತೆಯನ್ನು ಹೊಗಳಿದರು.

ಸಿಬಂದಿ ವರ್ಗದ ಪರವಾಗಿ ಶ್ರೀ ವಿಶ್ವನಾಥ ರಾವ್ ಕುಕ್ಕೆಹಳ್ಳಿಯವರು ಶಾರದಾ ಸೊಸೈಟಿಗೆ ಬಂದಾಗ ಮನೆಯ ವಾತಾವರಣ ಬರುತ್ತದೆ. ಅದಕ್ಕೆ ಕಾರಣ ಆಡಳಿತ ವರ್ಗ, ಸಿಬಂದಿ ವರ್ಗ ಎಲ್ಲರೂ ನಮ್ಮ ಸಮಾಜದವರೇ ಆದುದರಿಂದ ಹಾಗೆಯೇ ಕಾರ್ಯದರ್ಶಿಯವರಾದ ಕೆ. ವೇಣುಗೋಪಾಲರಿಂದ ಕಲಿತದ್ದು ತುಂಬಾ. ಹಾಗೆಯೇ ಅವರಲ್ಲಿ ನನಗೆ ಹೆಚ್ಚಿನ ಆತ್ಮೀಯತೆಯೂ ಇದೆ ಎಂದರು. ನಿವೃತ್ತಿ ಹೊಂದಿದರೂ ನಮ್ಮೊಡನೆ ಬೆರೆಯುವಂತಾಗಲಿ ಎಂದು ಆಶಿಸಿದರು.

ಅಧ್ಯಕ್ಷರಾದ ಶ್ರೀ ಎಮ್. ಸದಾನಂದ ರಾಯರು ಸೊಸೈಟಿಯ ಪರವಾಗಿ ಶಾಲು ಹೊದಿಸಿ, ಸ್ಮರಣಿಕೆಯನ್ನಿತ್ತು ಕೆ. ವೇಣುಗೋಪಾಲರಾವ್ ದಂಪತಿಗಳನ್ನು ಸನ್ಮಾನಿಸಿದರು. ಹಾಗೆಯೇ ಸಿಬಂದಿ ವರ್ಗದ ಪರವಾಗಿಯೂ ಸ್ಮರಣಿಕೆಯನ್ನಿತ್ತು ಗೌರವಿಸಲಾಯಿತು. ಸನ್ಮಾನಕ್ಕೆ ಉತ್ತರಿಸಿದ ವೇಣುಗೋಪಾಲರಾವ್ ಹಾಗೂ ಶ್ರೀಮತಿ ಶ್ರೀಮತಿಯವರು ಶ್ರೀಶಾರದಾ ಸೊಸೈಟಿಯ ಆಡಳಿತ ವರ್ಗ ಮತ್ತು ಸಿಬಂದಿವರ್ಗದವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು.

ವೇದಿಕೆಯಲ್ಲಿ ಅಧ್ಯಕ್ಷರಾದ ಎಮ್. ಸದಾನಂದ ರಾವ್, ಕೆ. ವೇಣುಗೋಪಾಲ ರಾವ್, ಶ್ರೀಮತಿ ವೇಣುಗೋಪಾಲರಾವ್, ಕಾರ್ಯದರ್ಶಿ ಪಟ್ಟಾಭಿರಾಮರಾವ್ ಉಪಸ್ಥಿತರಿದ್ದರು. ಕೊನೆಯಲ್ಲಿ ಕಾರ್ಯದರ್ಶಿ ಪಟ್ಟಾಭಿರಾಮರಾವ್‌ರವರು ಧನ್ಯವಾದವನ್ನಿತ್ತರು. ಕಾರ್ಯಕ್ರಮವನ್ನು ನಿರ್ದೇಶಕರಾದ ಅರವಿಂದ ಕುಮಾರ್ ನಿರ್ವಹಿಸಿದರು.

## ಕುಮಾರಿ ಕೃತಿಕಾ ರಾವ್



ಅಮೇರಿಕಾದ ಕ್ಯಾಲಿಫೋರ್ನಿಯಾದಲ್ಲಿ ವಾಸವಾಗಿರುವ ಶ್ರೀಮತಿ ರಾಜೇಶ್ವರಿ ಹಾಗೂ ಶ್ರೀ ಪಿ. ನಂದಕಿಶೋರ್ ರಾವ್‌ರವರ ಪುತ್ರಿ ಕುಮಾರಿ ಕೃತಿಕಾ ರಾವ್ ಭರತನಾಟ್ಯದಲ್ಲಿ ಆಸಕ್ತಿವಹಿಸಿ ಅಮೇರಿಕಾದ ಹೆಸರಾಂತ ನೃತ್ಯ ಶಿಕ್ಷಣ ಸಂಸ್ಥೆಯಾದ ಶ್ರೀಕೃಪಾ ಡ್ಯಾನ್ಸ್ ಕಂಪನಿಯ ಗುರುಗಳಾದ ಶ್ರೀಮತಿ ವಿಶಾಲ ರಮಣಿಯವರಲ್ಲಿ ಸುದೀರ್ಘ ಅಭ್ಯಾಸ ಮಾಡಿದ್ದು, ಆಕೆಯ ಮೊದಲ ರಂಗಪ್ರವೇಶ (arangetrum)ವು ತಾ.24-7-2010ರ ಸಂಜೆ 4ರಂದು ಕ್ಯಾಲಿಫೋರ್ನಿ ಯಾದ ವುಡ್‌ಸೈಡ್ ಹೈಸ್ಕೂಲ್, 199 ಚರ್ಚಿಲ್ ಅವೆನ್ಯೂ, ವುಡ್‌ಸೈಡ್ ಇದರ ಕಲಾಭವನದಲ್ಲಿ ನೆರವೇರಲಿದೆ. ಅಂದು ಆಕೆ ಸತತ ಮೂರು ಗಂಟೆಗಳ ಕಾಲ ಪ್ರದರ್ಶನ ನೀಡಲಿದ್ದಾಳೆ. ಪ್ರಸ್ತುತ ಅಮೇರಿಕಾದಲ್ಲಿ ಎಂಟನೆಯ ತರಗತಿಯ ವಿದ್ಯಾರ್ಥಿಯಾಗಿರುವ ಕೃತಿಕಾಳು ಮೈಸೂರಿನ ಶ್ರೀ ವೈ. ಉಮೇಶರಾವ್ ಹಾಗೂ ಕಸ್ತೂರಿ ದಂಪತಿಗಳ ಮತ್ತು ಕೊಡವೂರಿನ ಶ್ರೀ ಪಿ. ಚಂದ್ರ ಶೇಖರ ರಾವ್ ಹಾಗೂ ಸತ್ಯಭಾಮಾ ದಂಪತಿಗಳ ಪೌತ್ರಿ. ಕಾರ್ಯಕ್ರಮದ ಯಶಸ್ಸಿಗೂ ಕೃತಿಕಾಳ ಉಜ್ವಲ ಭವಿಷ್ಯಕ್ಕೂ ಶ್ರೀಶಾರದಾ ಬಳಗದ ತುಂಬು ಹೃದಯದ ಹಾರೈಕೆಗಳು.

## ಎಂ.ಆರ್.ವಾಸುದೇವ್

ಮಂಗಳೂರಿನ ಸುಬ್ರಹ್ಮಣ್ಯ ಸಭಾದಲ್ಲಿ ಸಕ್ರಿಯರಾಗಿರುವ ಶ್ರೀ ಎಂ.ಆರ್.ವಾಸುದೇವ್‌ರವರು ಮಂಗಳೂರು ವಿಮಾನ ನಿಲ್ದಾಣದ ನಿರ್ದೇಶಕರಾಗಿ ಕೊಯಮತ್ತೂರಿನಿಂದ ವರ್ಗಾವಣೆಗೊಂಡಿರುತ್ತಾರೆ. ನಮ್ಮ ಸಮಾಜದವರಾದ ಇವರಿಗೆ ಶ್ರೀಶಾರದಾ ಅಭಿನಂದನೆಗಳು

## ಕೆ. ವಾಸುದೇವ ರಾವ್

ಶ್ರೀ ಕೆ. ವಾಸುದೇವರಾವ್‌ರವರು ಮಜೂರು ಗ್ರಾಮಪಂಚಾಯತ್ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ. ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಇಲ್ಲಿ ಸಕ್ರೀಯರಾಗಿರುವ ಇವರಿಗೆ ಶ್ರೀಶಾರದಾ ಅಭಿನಂದನೆಗಳು

# ಶ್ರೀ ಮನಾಹೆಬ್ಬಾರರಿಗೆ ಬೆಂಗಳೂರಿನಲ್ಲಿ ಸನ್ಮಾನ



ನಿವೃತ್ತ ಉಪನ್ಯಾಸಕ, ಹರಿದಾಸ, ಕವಿ, ಯಕ್ಷಗಾನ ಕಲಾವಿದ, ಪ್ರವಚನಕಾರರಾದ ಶ್ರೀ ಮರೂರು ನಾರಾಯಣ ಹೆಬ್ಬಾರ ಇವರನ್ನು ಬೆಂಗಳೂರಿನ ಅಖಿಲ ಭಾರತ ಸ್ಥಾನಿಕ ಬ್ರಾಹ್ಮಣ ಸಭಾದ ಆಶ್ರಯದಲ್ಲಿ ಜೂನ್ 13ರಂದು ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಳದ 9ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹಾರ್ದಿಕ ವಾಗಿ ಅತ್ಯಂತ ಆದರಾರಿಯಿಂದ ಸನ್ಮಾನಿಸ ಲಾಯಿತು. ಸಭಾದ ಅಧ್ಯಕ್ಷರಾದ ನ್ಯಾಯವಾದಿ ಶ್ರೀ ಶರತ್‌ಕುಮಾರ್‌ರವರು ಶ್ರೀ ಮನಾ ಹೆಬ್ಬಾರರನ್ನು ಶಾಲು ಹೊದಿಸಿ, ಶ್ರೀಗಂಧದ ಹಾರ ಹಾಕಿ, ನೆನಪಿನ ಕಾಣಿಕೆಯಾಗಿ ಬೆಳ್ಳಿಯ ಕಾಲದೀಪಗಳ ಜತೆ, ಪದಕ, ಫಲ ತಾಂಬೂಲ, ಸನ್ಮಾನ ಪತ್ರಗಳನ್ನಿತ್ತು ಸನ್ಮಾನಿಸಿದರು. ಶ್ರೀ ಎಸ್. ಕೃಷ್ಣಾನಂದ ಇವರು ಸನ್ಮಾನ ಪತ್ರ ವಾಚಿಸಿ, ಶ್ರೀ ಹೆಬ್ಬಾರರ ಪರಿಚಯ ಮಾಡಿದರು. ಶ್ರೀ ಹೆಬ್ಬಾರರು ತನಗಿತ್ತ ಆತ್ಮೀಯ ಸನ್ಮಾನಕ್ಕೆ ಕೃತಜ್ಞತೆ ಸೂಚಿಸಿದರು. ಶ್ರೀ ಕಡಬ ಪ್ರಕಾಶ್ ರಾವ್ ಧನ್ಯವಾದವಿತ್ತರು.

ಭೋಜನಾನಂತರ ಶ್ರೀ ಮನಾಹೆಬ್ಬಾರರು 'ಆದಿ ಶಂಕರಾಚಾರ್ಯ' ಎಂಬ ಹರಿಕಥಾ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು.

## ಪುಣ್ಯಸ್ಮರಣೆ



ಜನನ : 08-08-1938 ಮರಣ : 17-07-2008

**ಡಾ। ಎಲ್ಲೂರು ಚಂದ್ರಶೇಖರ ರಾವ್**

**ಸರಿದುದೆರಡು ವರುಷಗಳು ನಿಮ್ಮ ಬದುಕಿನಾ ನೆನಪಿನಲಿ**

**ಅರ್ಪಿಸುವೆವು ನುಡಿನಮನಗಳ ಶ್ರದ್ಧಾಭಕ್ತಿಯಲಿ**

ಶ್ರೀಮತಿ ಇಂದಿರಾ (ಪತ್ನಿ)
ಡಾ। ವೈ. ಸುದರ್ಶನ ರಾವ್ ಮತ್ತು ಶ್ರೀಮತಿ ವಿದ್ಯಾ ರಾವ್
ಶ್ರೀ ವೈ. ಚಿತ್ತರಂಜನ ರಾವ್ ಮತ್ತು ಶ್ರೀಮತಿ ಭಾನುಪ್ರಿಯ
ಶ್ರೀಮತಿ ನಿವೇದಿತಾ ರಾವ್ ಮತ್ತು ಶ್ರೀ ಕೆ. ಎಸ್. ಮುರಲೀಧರ ರಾವ್
ಮತ್ತು ಮೊಮ್ಮಕ್ಕಳು

# ''ಹರಿಕಥೆ'' ಅಪೇಕ್ಷಿತವೇ? ಅನಪೇಕ್ಷಿತವೇ?-೫



**- ಹರಿದಾಸ ಮ.ನಾ.ಹೆಬ್ಬಾರ**
**ಎಂ.ಎ., ಬಿ.ಎಡ್.**

ಹರಿಕಥೆಯಲ್ಲಿ ನವರಸಗಳು :- ಮಾನವನು ಭಾವಜೀವಿ. ಇತರ ಪ್ರಾಣಿಗಳಿಗಿಲ್ಲದ 'ಸಂಚಾರಿ' ಮತ್ತು 'ಸ್ಥಾಯೀ' ಭಾವಗಳು ಮಾನವನಲ್ಲಿವೆ. ಈ ಭಾವಗಳಿಂದಾಗಿ ಶೃಂಗಾರ, ಹಾಸ್ಯವೇ ಮೊದಲಾದ ನವರಸಗಳನ್ನು, ಅವುಗಳ 'ಸ್ಥಾಯೀ' ಮತ್ತು 'ಸಂಚಾರೀ' ಭಾವಗಳನ್ನು ಆತನು ಬಲ್ಲನು. ಕೆಲವರಿಗೆ ಅವುಗಳ ಕುರಿತಾದ ವಿವರಣೆ ಮತ್ತು ಅರ್ಥವ್ಯಾಪ್ತಿ ಗೊತ್ತಿಲ್ಲದಿದ್ದರೂ ಮಾನಸಿಕವಾಗಿ ಅವುಗಳನ್ನು ಅನುಭವಿಸಬಲ್ಲರು. ಶೃಂಗಾರವು ನಮಗೆ ಸಂತಸವನ್ನುಂಟುಮಾಡಿದರೆ, ಹಾಸ್ಯವು ನಮ್ಮಲ್ಲಿ ಲಾಸ್ಯವನ್ನುಂಟುಮಾಡಿ ನಮ್ಮನ್ನು ನಗಿಸುತ್ತದೆ. ಅಂತೆಯೇ ಕರುಣ ರಸವು ನಮ್ಮಲ್ಲಿ ಮರುಕವನ್ನು ಹುಟ್ಟಿಸಿದರೆ ವೀರ, ರೌದ್ರ ಮುಂತಾದುವು ನಮ್ಮನ್ನು ಶೌರ್ಯದ ಕಡೆಗೆ ಒಯ್ಯುತ್ತದೆ. ಇಂತಹ ನವರಸಗಳು ಸಾಹಿತ್ಯದಲ್ಲಾಗಲೀ, ನಾಟಕ, ಕಥೆ, ಕಾದಂಬರಿ, ಕಾವ್ಯಗಳಲ್ಲಾಗಲೀ ಇರಬೇಕಾದುದು ಅತ್ಯವಶ್ಯಕ. ಅಂತೆಯೇ ಹರಿಕಥೆಯಲ್ಲಿಯೂ ಸಹಾ ಇಂತಹ ನವರಸಗಳನ್ನು ತರಲು ಹರಿದಾಸ ನಾದವನು ಶಕ್ತನಾಗದೇ ಹೋದರೆ ಅವನ ಕಥೆಯು ನಿಷ್ಪ್ರಯೋಜಕವಾದುದು.

ಸಾಹಿತ್ಯ ಕೃತಿಗಳಲ್ಲಾಗಲಿ, ನಾಟಕ ಇತ್ಯಾದಿಗಳಲ್ಲಾಗಲಿ ಮಾನವನು ನವರಸಗಳನ್ನು ನಿರೀಕ್ಷಿಸುತ್ತಾನೆ. ಮನುಷ್ಯನ ಭಾವನೆಗಳ ಉದಾತ್ತೀಕರಣಕ್ಕಾಗಿ ಈ ನವರಸಗಳು ಬೇಕೇ ಬೇಕು. ಈ ಮೊದಲೇ ನಾವು ತಿಳಿದಂತೆ ಹರಿಕಥೆಯು ಏಕಪಾತ್ರಾಭಿನಯವು. ಸಂಭಾಷಣೆಗೆ ಇಲ್ಲಿ ಇನ್ನೊಬ್ಬ ವ್ಯಕ್ತಿಯಾಗಲೀ ಪಾತ್ರಧಾರಿಯಾಗಲೀ ಇಲ್ಲ. ಆದ್ದರಿಂದ ಹರಿದಾಸನೊಬ್ಬನೇ ಎಲ್ಲಾ ರಸಭಾವಗಳನ್ನೂ ತನ್ನೊಬ್ಬನ ಮಾತಿನಿಂದಲೇ ಕಂಡು ತನ್ನೆದುರಿರುವ ಪ್ರೇಕ್ಷಕ ವರ್ಗವನ್ನು ರಂಜಿಸಬೇಕು. ಪತಿಯರ ಯಾ ಪ್ರಿಯಕರ-ಪ್ರೇಯಸಿಯರ ಸಂಭಾಷಣೆಯ ಸಂದರ್ಭವನ್ನು ಕಲ್ಪಿಸಿಕೊಂಡು ಅಲ್ಲಿ ಶೃಂಗಾರರಸವನ್ನು ತಂದುಕೊಳ್ಳಬೇಕು. ಕೆಲವು ಕಡೆಗಳಲ್ಲಿ ಸ್ವಯಂವರ ಮಂಟಪ, ಮದುಮಗಳ ವರ್ಣನೆ (ಉದಾ: ದ್ರೌಪದೀ ಸ್ವಯಂವರ ಇತ್ಯಾದಿ) ಮುಂತಾದ ಕಡೆಗಳಲ್ಲಿ ಪ್ರೇಕ್ಷಕರನ್ನು ಸೆರೆಹಿಡಿಯಬಹುದಾದಂತಹ ಶೃಂಗಾರವನ್ನು ತರಬಹುದು. ಹರಿಶ್ಚಂದ್ರ ಕತೆಯಲ್ಲಿ ರಾಜಕುಮಾರ ರೋಹಿತಾಶ್ವನ ಮರಣ, ಸತೀ ಸುತ ವಿಕ್ರಯ, ರಾಜ್ಯ ಸಮರ್ಪಣ-ಮುಂತಾದ ಸನ್ನಿವೇಶಗಳಲ್ಲಿ ಶೋಕ ರಸವನ್ನು ಸಾಕಷ್ಟು ಹರಿಯಿಸಿ ಪ್ರೇಕ್ಷಕರಲ್ಲಿ ಕರುಣೆಯ ಹೊಳೆ ಹರಿಸಿದಂತೆ ಕಣ್ಣೀರನ್ನು ತರಿಸಬಹುದಾಗುತ್ತದೆ. ಮಹಾಭಾರತದಲ್ಲಿ ಉತ್ತರ ಕುಮಾರನ ಪೌರುಷದ ಕಥೆಯು ಹಾಸ್ಯರಸಕ್ಕೆ ಉತ್ತಮ ಇಂಬನ್ನು ಕೊಡಬಲ್ಲದು. ಅಭಿಮನ್ಯುವಿನ ಸಾಹಸದ ವರ್ಣನೆಯು ವೀರರಸಕ್ಕೆ ಉತ್ತಮವಾದ ಗ್ರಾಸವನ್ನು ಒದಗಿಸುತ್ತದೆ. ಹೀಗೆ ಹರಿದಾಸನಾದವನು ಯಾವುದೇ ಕಥೆಯನ್ನು ಹೇಳುತ್ತಿರಲಿ, ಅದರಲ್ಲಿ ಸಾಂದರ್ಭಿಕವಾಗಿ ನವರಸಗಳನ್ನು ತಂದು ಪ್ರೇಕ್ಷಕ ವರ್ಗವನ್ನು ತಲೆದೂಗುವಂತೆ ಮಾಡಬಲ್ಲವನೇ ಯಶಸ್ವೀ ಹರಿದಾಸ ನೆನಿಸುವನು.

(ಮುಂದುವರಿಯುವುದು)

# ತುಳುನಾಡಿನಲ್ಲಿ ಬ್ರಾಹ್ಮಣ್ಯ

ದಿ। ಪ್ರೊ। ಗುರುರಾಜ ಭಟ್ಟರ ಕೃತಿಯಿಂದ ಸಂಗ್ರಹಿಸಿದ ಭಾಗ
ಸಂಗ್ರಹ : ಸಿ.ಎಸ್.ರಾವ್.

(ಹಿಂದಿನ ಸಂಚಿಕೆಯಿಂದ)

''ರುದ್ರನಿಗೂ, ಭೂದೇವಿಗೂ, ಪವಿತ್ರವಾದ ಕದಂಬ ವೃಕ್ಷದ ಕೆಳಗೆ, ಶತ್ರುಗಳನ್ನು ಸದೆ ಬಡಿದು, ಓಡಿಸುವ ಮತ್ತು ಅಧೀನ ಅರಸರಿಂದ ಗೌರವಾನ್ವಿತರಾನ ಮಯೂರು ವರ್ಮನೆಂಬವನು ಹುಟ್ಟಿದ್ದನು.

ಆತನಿಗೆ ಹಣೆಯಲ್ಲಿ ಮೂರನೆಯ ಕಣ್ಣು ಇದ್ದುದರಿಂದ ಅವನು ಕೀರಿಟವನ್ನು ತಲೆಯಲ್ಲಿ ಧರಿಸಲಾರದೆ, ಮೊಣಕಾಲಿನ ಸಮೀಪಧರಿಸಿ ಶೋಭಿಸುತ್ತಿದ್ದನು. ಈ ಪ್ರಶಸ್ತಿಯಲ್ಲಿ ಇನ್ನೇನನ್ನು ಹೇಳಲಿ? ಕದಂಬ ವೃಕ್ಷ ನೆಳಲಲ್ಲಿ ಆತನು ಬೆಳೆಯುತ್ತಾ ಬಂದಂತೆ ಆತನ ಕುಟುಂಬವು ಕದಂಬ ಕುಲವೆಂದು ಪರಿಗಣಿಸಲ್ಪಟ್ಟಿತು. ಈ ಮುಕ್ಕಣ್ಣ ಕದಂಬ ಮಯೂರವರ್ಮನ ನಂತರ ಆತನ ಕುಲದಲ್ಲಿ ಅನೇಕ ಅರಸರು ಆಳಿದರು''

ಅಂತೆಯೇ ಕ್ರಿ.ಶ.1077ನೆಯ ಜೈನ ಶಾಸನ ಒಂದರ ಪ್ರಕಾರ ಮಯೂರವರ್ಮನ ಕುರಿತಾದ ಕೆಲವು ವಿವರಗಳು ಸಿಗುತ್ತವೆ. ''ಮಯೂರವರ್ಮನಿಗೆ ಶಾಸನದೇವಿಯಿಂದ ಒಂದು ರಾಜ್ಯವನ್ನು ಪಡೆದು ಕೊಡಲಾಗಿ ಕಾನನವನ್ನು ಆ ರಾಜಕುಮಾರನಿಗೆ ರಾಷ್ಟ್ರವಾಗಿ ಪರಿವರ್ತಿಸಲಾಗಿ, ಮಯೂರಗಳಿಂದ ಕೂಡಿದ ಕಿರೀಟವನ್ನು ಆತನ ಶಿರಸ್ಸಿನಲ್ಲಿಡಲಾಯಿತು. ಇದರಿಂದ ಅವನಿಗೆ ಮಯೂರವರ್ಮನೆಂಬ ಹೆಸರು ಉಂಟಾಯಿತು. ಕದಂಬ ಕುಲದ ಶ್ರೇಷ್ಠ ಅರಸನಾದ ತ್ರಿಲೋಚನ''.

ಮೇಲಿನ ಉದಾಹರಣೆಗಳಿಂದ ಮಯೂರ ವರ್ಮನ ಕತೆಯು ಹನ್ನೆರಡನೆಯ ಶತಮಾನದಲ್ಲಿ ಉದ್ಭವವಾಗಿ ಮುಂದಿನ ವರ್ಷಗಳಲ್ಲಿ ಬೆಳೆಯುತ್ತಾ ಹೋಗಿ ಹೊಸ ಹೊಸ ಕಾಲ್ಪನಿಕ ವಿಚಾರಗಳನ್ನು ಒಳಗೊಂಡಿತೆಂದು ಹೇಳಬಹುದು.

(ಮುಂದುವರಿಯುವುದು)

## ಮಿಥುನ ಮಾಸ ವಿಶೇಷ ದಿನಗಳು

| | |
|---|---|
| 16-07-2010 | ಕರ್ಕಾಟಕ ಸಂಕ್ರಮಣ |
| 20-07-2010 | ಮಳೆ ನಕ್ಷತ್ರ ಪುಷ್ಯ ಪ್ರಾರಂಭ |
| 21-07-2010 | ಸ್ಮಾರ್ತಕಾದಶೀ |
| 25-07-2010 | ವ್ಯಾಸಪೂಜಾ, ಚಾತುರ್ಮಾಸ್ಯವ್ರತಾರಂಭ |
| 26-07-2010 | ಗುರುಪೂರ್ಣಿಮಾ ಸಂ.ಘಂಟೆ 9-18ಕ್ಕೆ |
| 29-07-2010 | ಸಂಕಷ್ಟಹರ ಚತುರ್ಥಿ ಚಂದ್ರೋದಯ ಘಂಟೆ ರಾತ್ರಿ 9-18ಕ್ಕೆ |
| 03-08-2010 | ಭರಣಿ, ಮಹಾನಕ್ಷತ್ರ, ಆಶ್ಲೇಷ ಪ್ರಾರಂಭ |
| 06-08-2010 | ಸರ್ವೈಕಾದಶೀ |
| 10-08-2010 | ಅಮಾವಾಸ್ಯ |
| 16-08-2010 | ಸಿಂಹ ಸಂಕ್ರಮಣ |

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಮತ್ತು ಶ್ರೀಪಾದೆಬೆಟ್ಟು ಭಾಗ್ಯಚಂದ್ರ ರಾಯರ ಪುತ್ರಿ **ಅರ್ಚನ** ಹಾಗೂ ಶ್ರೀಮತಿ ಮತ್ತು ಶ್ರೀ ವೆಂಕಟ್ರಾಮನ್ನರ ಪುತ್ರ **ಪವನ್‌ಕುಮಾರ್** ಇವರ ವಿವಾಹವು ತಾ.24-05-2010ರಂದು ಪುತ್ತೂರು ಕೊಂಬೆಟ್ಟು ಎಂ.ಸುಂದರ್‌ರಾಮಶೆಟ್ಟಿ ಸ್ಮಾರಕ ಬಂಟರ ಭವನದಲ್ಲಿ ನೆರವೇರಿತು

★★★★

ರಾಮಕೃಷ್ಣರಾವ್, ಕ್ಯೊಲ ಮುಂಡಾಜೆ ಇವರ ಪುತ್ರ **ರಾಜಶೇಖರ್** ಹಾಗೂ ಕರಣಿಕ ಮನೆ ಶ್ರೀ ಲಕ್ಷ್ಮೀನಾರಾಯಣರಾವ್ ಮತ್ತು ಶ್ರೀಮತಿ ವಸಂತಿ ಇವರ ಪುತ್ರಿ **ರಮ್ಯ** ಇವರ ವಿವಾಹವು ತಾ.26-05-2010ರಂದು ಸುಳ್ಯ ಶಿವಕೃಪಾ ಕಲ್ಯಾಣಮಂಟಪದಲ್ಲಿ ನೆರವೇರಿತು.

★★★★

ಪೈಕಾನ ಶ್ರೀ ಲಕ್ಷ್ಮೀನಾರಾಯಣ ರಾಯರ ಪುತ್ರ **ರವಿಶಂಕರ** ಹಾಗೂ ಮಹಾರಾಷ್ಟ್ರದ ಜಲಗಾಂವ್‌ನಲ್ಲಿರುವ ಹೋಟೆಲ್ ಉದ್ಯಮಿ ಪೆರಂಕ ಶ್ರೀ ವಾದಿರಾಜರಾಯರ ಪುತ್ರಿ **ನೇಹಾ** ಇವರ ವಿವಾಹವು ತಾ.24-06-2010ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

★★★★

ಕಳವು ಶ್ರೀಮತಿ ಮತ್ತು ಶ್ರೀ ರಾಧಾಕೃಷ್ಣ ರಾಯರ ಪುತ್ರ **ಜೀವನ್** ಹಾಗೂ ಬೆಳ್ಳಣ್ಣು ಶ್ರೀಮತಿ ಮತ್ತು ಶ್ರೀ ಭವಾನಿಶಂಕರರಾಯರ ಪುತ್ರಿ **ತೃಪ್ತಿ (ಸೋನಿ)** ಇವರ ವಿವಾಹವು ತಾ.04-07-2010 ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೆರವೇರಿತು.

ಕುಕ್ಕೆಹಳ್ಳಿ ಶ್ರೀ ನಾರಾಯಣ ರಾವ್‌ರ ಪೌತ್ರ ಶ್ರೀಮತಿ ಸುಮಿತ್ರ ಮತ್ತು ದಿ। ಸದಾಶಿವ ರಾಯರ ಪುತ್ರ **ಕೃಷ್ಣರಾಜ** ಹಾಗೂ ಶ್ರೀಮತಿ ಜಯಂತಿ ಮತ್ತು ಎಲ್ಲೂರು ಶ್ರೀ ಕೃಷ್ಣರಾಜರವರ ಪುತ್ರಿ **ವೀಣಾ** ಇವರ ವಿವಾಹವು ತಾ.04-07-2010 ರಂದು ಎರ್ಮಾಳು ಶ್ರೀ ಜನಾರ್ದನ ದೇವಸ್ಥಾನದ ಶ್ರೀ ಜನಾರ್ದನ ಜನಕಲ್ಯಾಣ ಸಭಾಂಗಣದಲ್ಲಿ ನೆರವೇರಿತು.

★★★★

ಕಾಪು ದಿ। ಭವಾನಿಶಂಕರರಾವ್ ಮತ್ತು ಶ್ರೀಮತಿ ಮನೋರಮಾ ಬಿ. ರಾವ್ ಇವರ ಪುತ್ರ **ಶಿವಪ್ರಸಾದ್** ಹಾಗೂ ಹೊಸಕೋಟೆ ಶ್ರೀ ಸುಬ್ಬರಾವ್ ಮತ್ತು ಶ್ರೀಮತಿ ಸುನಂದ ಇವರ ಪುತ್ರಿ **ರಮ್ಯ** ಇವರ ವಿವಾಹವು ತಾ.05-07-2010 ರಂದು ಕಾಪು ಶ್ರೀ ಲಕ್ಷ್ಮೀಜನಾರ್ದನ ದೇವಸ್ಥಾನದ ಕಲ್ಯಾಣಮಂಟಪದಲ್ಲಿ ನೆರವೇರಿತು.

★★★★

ಶ್ರೀರಂಗಪಟ್ಟಣದ ಶ್ರೀಯುತ ಬಿ. ವಿ. ವಿಷ್ಣುಮೂರ್ತಿ ಮತ್ತು ಶ್ರೀಮತಿ ಕೌಸಲ್ಯರವರ ಪುತ್ರ **ವಿಕ್ರಮ್** ಹಾಗೂ ಕರಾಯ ಶ್ರೀಮತಿ ಮತ್ತು ಶ್ರೀ ಡಿ. ಕೃಷ್ಣಭಟ್ಟರ ಪುತ್ರಿ **ಜಯಮಧು** ಇವರ ವಿವಾಹವು ತಾ.05-07-2010 ರಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಮಹೋತ್ಸವ ಕಲ್ಯಾಣಮಂಟಪದಲ್ಲಿ ನೆರವೇರಿತು.

## ನಿಧನ

**ಮಾಂಟ್ರಾಡಿ ಕುಮಾರಸ್ವಾಮಿ**

ಕೆನರಾಬ್ಯಾಂಕಿನ ನಿವೃತ್ತ ಅಧಿಕಾರಿ ಉಡುಪಿ ಮೂಲದ ಮಾಂಟ್ರಾಡಿ ಕುಮಾರ ಸ್ವಾಮಿ (74) ಇವರು ಮೇ.24ರಂದು ಚೆನ್ನೈ ಅಣ್ಣಾನಗರದ ಸ್ವಗೃಹದಲ್ಲಿ ಹೃದಯಾಘಾತದಿಂದ ನಿಧನ ಹೊಂದಿದರು. ಮೃತರು ಪತ್ನಿ, ಪುತ್ರಿ, ಇಬ್ಬರು ಮೊಮ್ಮಕ್ಕಳು, ನಾಲ್ಕು ಜನ ಸಹೋದರ ಮತ್ತು ಇಬ್ಬರು ಸಹೋದರಿಯರನ್ನು ಅಗಲಿದ್ದಾರೆ. ಉಡುಪಿ ಬೋರ್ಡ್ ಹೈಸ್ಕೂಲಿನಲ್ಲಿ ಕನ್ನಡ ಪಂಡಿತರಾಗಿದ್ದ ವಿದ್ವಾನ್ ಮಾಂಟ್ರಾಡಿ ಗೋವಿಂದ ರಾಯರ ಪುತ್ರರಾಗಿದ್ದ ಇವರು ಬೆಂಗಳೂರು, ಆಗ್ರಾ, ಚೆನ್ನೈ ಸಹಿತ ವಿವಿಧ ಶಾಖೆಗಳಲ್ಲಿ ಪ್ರಬಂಧಕರಾಗಿ, ನಿವೃತ್ತಿ ಬಳಿಕ ಚೆನ್ನೈಯಲ್ಲಿ ನೆಲೆಸಿದ್ದರು.

**ಶ್ರೀಮತಿ ಯಮುನಮ್ಮ**

ಪೆರ್ಡೂರಿನ ದಿ। ಶ್ರೀ ವೆಂಕಟ್ರಾಯ ಹೆಬ್ಬಾರ್ ಇವರ ಪತ್ನಿ ಶ್ರೀಮತಿ ಯಮುನಮ್ಮ (85 ವರ್ಷ) ಇವರು ತಾ.08-07-2010ರಂದು ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರು ಓರ್ವ ಪುತ್ರಿ, ಓರ್ವ ಪುತ್ರ ಮತ್ತು ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ. ಇವರ ಪುತ್ರ ಶ್ರೀ ಪದ್ಮನಾಭ ಹೆಬ್ಬಾರ್ ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿ.

## ವಿಳಾಸ ಬದಲಾವಣೆ

**K.S.PRABHAKAR RAO**
I Floor, 602-B, I West Cross,
Vishwa Manava Double Road,
Kuvempu Nagar, Mysore - 570 023.

**ಕೆ. ಪ್ರಕಾಶ ರಾವ್**
ಪಿಡಬ್ಲ್ಯುಡಿ ಕ್ವಾರ್ಟರ್ಸ್ ನಂ.22,
ವಿವೇಕಾನಂದ ರಸ್ತೆ, 2ನೇ ಅಡ್ಡರಸ್ತೆ,
ಅಜ್ಜರಕಾಡು, ಉಡುಪಿ.

**ಎಂ. ನಾರಾಯಣ ಹೆಬ್ಬಾರ**
ನಂ.304, ಸುರಮ್ಯಾ ಅಪಾರ್ಟ್‌ಮೆಂಟ್
ಶ್ರೀಶಾರದಾ ಮಂಟಪದ ಎದುರು,
ಕುಂಜಿಬೆಟ್ಟು, ಉಡುಪಿ.

**ಪ. ಸಂಜಯಕುಮಾರ್ ರಾವ್**
ಶಾಖಾ ಪ್ರಬಂಧಕ
ದಿ। ನ್ಯೂಇಂಡಿಯಾ ಇನ್ಶೂರೆನ್ಸ್ ಕಂ. ನಿ.,
ಚಂದನ ಕಾಂಪ್ಲೆಕ್ಸ್, ಹರ್ಷ ಮಹಲ್ ರೋಡ್,
ಹಾಸನ - 573 201.

**ಬಿ. ಶ್ರೀಪತಿ ರಾವ್**, 471, ಮೊದಲ ಮಹಡಿ,
ಅಮರಜ್ಯೋತಿ ಲೇ-ಔಟ್, ವೆಸ್ಟ್‌ವಿಂಗ್,
7ನೇ ಮೈನ್, ಸಾಸ್ಕೆನ್ ಎದುರು,
ದೊಮ್ಮಲೂರು, ಬೆಂಗಳೂರು-71.

**ಶ್ರೀಮತಿ ಪದ್ಮಾವತಿ ಗಣೇಶ**
ಮನೆ ನಂ.4-17(ಬಿ.ಸಿ.), ತ್ರ್ಯಂಬಕೇಶ್ವರ
ದೇವಸ್ಥಾನದ ಬಳಿ, ಹೆರ್ಗ ರಸ್ತೆ, ಪರ್ಕಳ, ಉಡುಪಿ.

## ಶುಭ ಜನನ

ಮಡಗಾಂವ್ ಗೋವಾದಲ್ಲಿರುವ ಡಾ। ಪ್ರಿಯಾ ರಾವ್ ಮತ್ತು ಡಾ। ಮನ್‌ಜೀತ್ ಸಿಂಗ್‌ರವರಿಗೆ ತಾ.22-4-2010ರಂದು ಹೆಣ್ಣು ಮಗುವಿನ ಜನನ.

## ವಿದೇಶ ಪ್ರವಾಸ

ಬೆಂಗಳೂರು ವಿಪ್ರೋ ಕಂಪೆನಿಯಲ್ಲಿ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದ ಮಾಂಟ್ರಾಡಿ ಶ್ರೀಕಾಂತ ರಾವ್ ಮತ್ತು ಶ್ರೀಮತಿ ಗೀತಾ ರಾವ್ ಇವರ ಪುತ್ರ ವಿವೇಕ್ ರಾವ್ ಇವರು ಕಂಪನಿ ಕಾರ್ಯನಿಮಿತ್ತ ತಾ.30-06-2010 ರಂದು ಐರ್‌ಲ್ಯಾಂಡ್ (IRELAND)ಗೆ ತೆರಳಿರುತ್ತಾರೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು


ಉಡುಪಿ ವಿಶಿಷ್ಟ ರುಚಿಯುಳ್ಳ
Rao's 'ಮಾತೃಛಾಯಾ'ರವರ
ಸಾರಿನ ಹಾಗೂ ಸಾಂಬಾರ್ ಮಸಾಲೆ, ಅಪ್ಪೆಮಿಡಿ ಹಾಗೂ ಮಿಡಿ ಉಪ್ಪಿನಕಾಯಿ
ಹಪ್ಪಳ ಹಾಗೂ ಸೆಂಡಿಗೆಗಳು, ಶುದ್ಧ ದನದ ತುಪ್ಪ ಹಾಗೂ ಜೇನು ತುಪ್ಪ
-: ಮೊದಲಾದ ನಿತ್ಯೋಪಯೋಗಿ ವಸ್ತುಗಳಿಗೆ ಸಂದರ್ಶಿಸಿರಿ :-
ಭಾರತ್ ಸ್ಟೋರ್ಸ್
ರಥಬೀದಿ, ಉಡುಪಿ - 576 101. ಫೋನ್ : 2522444



ನಮ್ಮಲ್ಲಿ ಹೋಮ, ಹವನ ಇತ್ಯಾದಿ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಡಲಾಗುವುದು ಹಾಗೂ (ಹೊರಗಿನ) ಮದುವೆ, ಉಪನಯನ ಇತ್ಯಾದಿ ವಿಶೇಷ ಸಮಾರಂಭಗಳಿಗೆ ಕ್ಯಾಟರಿಂಗ್ ವ್ಯವಸ್ಥೆಯನ್ನು ಮಾಡಲಾಗುವುದು.
ಸಂಪರ್ಕಿಸಿರಿ :
ಕೆ. ರಾಮಮೂರ್ತಿ ಭಟ್, ಪುರೋಹಿತರು
ಶಾರದಾ ಕೃಪಾ, ಆತ್ರಾಡಿ, ಉಡುಪಿ ತಾಲೂಕು. ಮೊಬೈಲ್ : 9448108010

## ಅಭಿನಂದನೆ



**ಶ್ರೀಶ ರಾವ್**

ಶ್ರೀಶ ರಾವ್ ಇವನು ಸರ್ಕಾರಿ ಪದವಿಪೂರ್ವ ಕಾಲೇಜು, ಬ್ರಹ್ಮಾವರ ಇದರ ವಿದ್ಯಾರ್ಥಿಯಾಗಿದ್ದು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 597 (95.5%) ಅಂಕಗಳಿಸಿರುತ್ತಾನೆ. ಇವನು ಕೊಕ್ಕರ್ಣೆಯ ಸಾಸ್ತಾವು ಶಿವರಾಮರಾವ್ ಹಾಗೂ ಶಕುಂತಳಾ ದಂಪತಿಯ ಪುತ್ರ ಈತನ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಕು॥ ಜ್ಯೋತಿಶ್ರೀ**

ಚೊಕ್ಕಾಡಿ ಶ್ರೀ ಭಾಸ್ಕರರಾವ್ ಮತ್ತು ಶ್ರೀಮತಿ ಸುಧಾರಾವ್ ಕುಂಜೂರು ಇವರ ಪುತ್ರಿ ಕು॥ ಜ್ಯೋತಿಶ್ರೀ ಇವಳು ಉಚ್ಚಿಲ ಸರಸ್ವತಿ ಮಂದಿರ ಪ್ರೌಢಶಾಲೆಯಲ್ಲಿ 2009-10ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 545 (87%) ಅಂಕ ಗಳಿಸಿ ಶಾಲೆಯಲ್ಲಿ ಪ್ರಥಮ ಸ್ಥಾನ ಪಡೆದಿರುತ್ತಾಳೆ. ಇವಳ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಅಶ್ವತ್ಥ್ ರಾವ್ ಸಿ.ಆರ್.**

ಅಶ್ವತ್ಥ್ ರಾವ್ ಸಿ.ಆರ್. ಇವನು 2010 ಏಪ್ರಿಲ್ ತಿಂಗಳಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 583(93.28%) ಅಂಕಗಳಿಸಿ ಉತ್ತೀರ್ಣನಾಗಿರುತ್ತಾನೆ. ಇವನು ಕಲ್ಯಾಣಪುರ ಸಂತೆಕಟ್ಟೆಯ ಚೆಂಡುಕಳ ಡಾ॥ ರಮೇಶ್‌ರಾವ್ ಮತ್ತು ಡಾ॥ ಶೋಭಾರಾವ್ ದಂಪತಿಗಳ ಪುತ್ರ. ಈತನ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಚಿ॥ ರಾಕೇಶ ಎನ್.ಆರ್.**

ಮಣ್ಣಗುಡ್ಡ, ಮಂಗಳೂರು ಇಲ್ಲಿ ವಾಸವಾಗಿರುವ ಶ್ರೀ ನಟ್ಟೋಜಿ ಶ್ಯಾರ ರಾಜಾರಾಮ ಹಾಗೂ ಶ್ರೀಮತಿ ರಮಾವಾಣಿ ಇವರ ಪ್ರಥಮ ಪುತ್ರ ಚಿ॥ ರಾಕೇಶ ಎನ್.ಆರ್. ಇವನು 2009-10ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ PCM ವಿಷಯಗಳಲ್ಲಿ 100% ಅಂಕ ಗಳಿಸಿರುತ್ತಾನೆ. ಅಲ್ಲದೆ CET 2009-10 (ಇಂಜಿನಿಯರಿಂಗ್) ಪರೀಕ್ಷೆಯಲ್ಲಿ ಕರ್ನಾಟಕ ರಾಜ್ಯಕ್ಕೆ 11ನೇ ರ್‍ಯಾಂಕ್ ಗಳಿಸಿರುತ್ತಾನೆ. ಇವನ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



### ರಾಷ್ಟ್ರೀಯ ಗಣಿತ ಸ್ಪರ್ಧೆಯಲ್ಲಿ ಚಾಂಪಿಯನ್ ಮಾ॥ ಅಮಿತೇಶ್ ರಾವ್

2009-10ನೇ ಸಾಲಿನ ರಾಷ್ಟ್ರೀಯ ಅಬೆಕಸ್ ಗಣಿತ ಸ್ಪರ್ಧೆಯು ಬೆಂಗಳೂರಿನಲ್ಲಿ ನಡೆದಿದ್ದು ಮಾ॥ ಅಮಿತೇಶ್ ರಾವ್ 'ಚಾಂಪಿಯನ್ ಆಫ್ ಚಾಂಪಿಯನ್' ಆಗಿ ತನ್ನನ್ನು ಗುರುತಿಸಿ ಕೊಂಡಿರುತ್ತಾರೆ. ರಾಷ್ಟ್ರಾದ್ಯಂತ ಪ್ರತಿಭಾನ್ವಿತ ವಿದ್ಯಾರ್ಥಿಗಳು ಪಾಲ್ಗೊಂಡ ಈ ಸ್ಪರ್ಧೆಯಲ್ಲಿ ಮಾ॥ ಅಮಿತೇಶ್ ಕೇವಲ 5 ನಿಮಿಷದಲ್ಲಿ 95 ಪ್ರಶ್ನೆಗಳಿಗೆ ಸರಿಯುತ್ತರ ನೀಡಿ ಉಳಿದೆಲ್ಲಾ ಸ್ಪರ್ಧಿಗಳನ್ನು ಹಿಂದಿಕ್ಕಿದ್ದಾನೆ.

ಮಹಾರಾಷ್ಟ್ರದ ಲೆಕಾಲ್ ಸಿಲ್ವರ್ ಓಕ್ ಶಾಲೆಯ 4ನೇ ತರಗತಿಯ ವಿದ್ಯಾರ್ಥಿಯಾಗಿರುವ ಅಮಿತೇಶ್ ನಾಸಿಕ್‌ನ ತ್ರಿನೇತ್ರ ಅಬಾಕಸ್ ಸೆಂಟರ್‌ನಲ್ಲಿ ಗಣಿತ ತರಬೇತಿ ಪಡೆದು, ನಾಸಿಕ್ ವಿಭಾಗದ ಹಲವಾರು ವಿದ್ಯಾರ್ಥಿಗಳ ಜೊತೆ ಬೆಂಗಳೂರಿನಲ್ಲಿ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾನೆ.

ನಾಸಿಕ್‌ನಲ್ಲಿ ಖಾಸಗಿ ಕಂಪನಿಯಲ್ಲಿ ಉದ್ಯೋಗಿ ಯಾಗಿರುವ ಕರಂಬಾಡಿ ಶ್ರೀ ಚಂದ್ರಶೇಖರರಾವ್ ಹಾಗೂ ಶ್ರೀಮತಿ ಭಾರತಿ ಸಿ.ರಾವ್ ದಂಪತಿಗಳ ಪುತ್ರನಾಗಿರುವ ಮಾ॥ ಅಮಿತೇಶ್‌ನ ಸಾಧನೆಗೆ ಶ್ರೀಶಾರದಾ ಅಭಿನಂದನೆಗಳು.



**ಕು॥ ಶ್ರೀಪ್ರಧಾ ಕೆ.**


2009-10ನೇ ಸಾಲಿನ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶ್ರೀಪ್ರಧಾ ಕೆ. 573(95.5%) ಹಾಗೂ ಪಿ.ಸಿ.ಎಮ್‌ನಲ್ಲಿ 97.6% ಅಂಕಗಳನ್ನು ಗಳಿಸಿದ್ದು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಈಕೆ ಪ್ರಶಾಂತನಗರ, ದೇರೆಬೈಲು ಮಂಗಳೂರಿನಲ್ಲಿ ವಾಸ್ತವ್ಯವಿರುವ ಶ್ರೀಸತ್ಯನಾರಾಯಣ ಕೆ. ಮತ್ತು ಶ್ರೀಮತಿ ವಿನುತಾ ಕೆ. ಇವರ ಪುತ್ರಿ. ಈಕೆ ಕೆನರಾ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯಾಗಿದ್ದು 2 ವರ್ಷ ಹಿಂದೆ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 97.6% ಅಂಕ ಗಳಿಸಿದ್ದಾಳೆ. ಶ್ರೀಪ್ರಧಾ ಕೆ. ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಕು॥ ರಶ್ಮಿ ಡಿ. ರಾವ್**

ಗೋಪಾಲಪುರ ಧಾರವಾಡದ ಕರ್ನಾಟಕ ಬ್ಯಾಂಕಿನಲ್ಲಿ ಸೀನಿಯರ್ ಬ್ರಾಂಚ್ ಮೆನೇಜರ್ ಆಗಿ ಕೆಲಸ ಮಾಡುತ್ತಿರುವ ಶ್ರೀ ದಿವಾಕರ ಕೆ.ಎಸ್. ಮತ್ತು ಶ್ರೀಮತಿ ವಿಜಯಲಕ್ಷ್ಮಿ ದಂಪತಿಗಳ ಪುತ್ರಿ ಕು॥ ರಶ್ಮಿ ಡಿ.ರಾವ್ ಇವಳು ಏಪ್ರಿಲ್ 2010ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.97 ಅಂಕ ಪಡೆದು ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿ ಶಾಲೆಗೆ ಪ್ರಥಮ ಸ್ಥಾನಗಳಿಸಿರುತ್ತಾಳೆ.

ಇವಳು ಧಾರವಾಡದ ರಾಜೀವ ಗಾಂಧಿ ವಿದ್ಯಾಲಯದಲ್ಲಿ ಎಸ್.ಎಸ್‌ಎಲ್.ಸಿ. ವ್ಯಾಸಂಗ ಮಾಡಿದ್ದು ಸಧ್ಯ ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದಾಳೆ. ಕು॥ರಶ್ಮಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಚಿ॥ ಆದಿತ್ಯ ಕೆ.**

ಮಂಗಳೂರಿನ ಕೆನರಾ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿ ಚಿ॥ ಆದಿತ್ಯ ಕೆ. ಇವನು 2009-10ನೇ ಸಾಲಿನ ದ್ವಿತೀಯ ಪಿಯುಸಿ ಪಬ್ಲಿಕ್ ಪರೀಕ್ಷೆಯಲ್ಲಿ 559 ಅಂಕಗಳಿಸಿ ವಿಶಿಷ್ಟದರ್ಜೆಯಲ್ಲಿ ಉತ್ತೀರ್ಣನಾಗಿರುತ್ತಾನೆ. ಎಲೆಕ್ಟ್ರಾನಿಕ್ಸ್‌ನಲ್ಲಿ 100% ಅಂಕಗಳಿಸಿರುವ ಈತ 2009-10ನೇ ಸಾಲಿನ CET ಇಂಜಿನಿಯರಿಂಗ್ ವಿಭಾಗದಲ್ಲಿ 146ನೇ ರ್‍ಯಾಂಕ್ ಮತ್ತು ಕಾಮೆಡ್‌ಕೆ ಪರೀಕ್ಷೆಯಲ್ಲಿ 49ನೇ ರ್‍ಯಾಂಕ್‌ಗಳಿಸಿ ವಿಶೇಷ ಸಾಧನೆ ಮಾಡಿರುತ್ತಾನೆ. ಈತ ಮಂಗಳೂರಿನ ಶ್ರೀ ವೇಣು ಗೋಪಾಲ ಶ್ಯಾನುಭಾಗ ಕೂಡ್ಲು ಮತ್ತು ಶ್ರೀಮತಿ ಮಮತಾ ಇವರ ಸುಪುತ್ರ. ಇವನ ಸಾಧನೆಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಕು॥ ಅಪೂರ್ವ**

ಮಹಾರಾಷ್ಟ್ರದ ಕೊರೆಗಾಂವ್‌ನಲ್ಲಿರುವ ಶ್ರೀ ನಾಗರಾಜ್ ಮತ್ತು ಶ್ರೀಮತಿ ಹರಿಣಿಯವರ ಪುತ್ರಿ (ದಿ॥ ಗೋವಿಂದರಾವ್ ಮತ್ತು ಶಾಂತಾ ರಾವ್‌ರವರ ಮೊಮ್ಮಗಳು) 10ನೇ ತರಗತಿಯಲ್ಲಿ ಶೇ.94.36 ಅಂಕ ಪಡೆದು ವಿಶಿಷ್ಟ ಶ್ರೇಣಿಯಲ್ಲಿ ಉತ್ತೀರ್ಣಳಾಗಿದ್ದಾಳೆ. ಗಣಿತದಲ್ಲಿ 150ರಲ್ಲಿ 150 ಅಂಕ ಪಡೆದಿರುವ ಇವಳಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಗೃಹಪ್ರವೇಶ

ಶ್ರೀಮತಿ ಪುಷ್ಪಾ ಜೆ. ರಾವ್ ಮತ್ತು ಶ್ರೀ ಬಿ. ಜ್ಞಾನೇಶ್ವರ ರಾವ್ ಇವರ ಪುತ್ರಿ ಶ್ರೀಮತಿ ರಾಜೇಶ್ವರಿ ಮತ್ತು ಅಳಿಯ ಶ್ರೀ ಕೃಷ್ಣಪ್ರಸಾದ್ ಇವರು ಕಿನ್ನಿಮುಲ್ಕಿ, ಉಡುಪಿಯಲ್ಲಿ ನಿರ್ಮಿಸಿದ ನೂತನಗೃಹ ''ಪ್ರತ್ಯೂಷ''ದ ಪ್ರವೇಶವನ್ನು 4ನೇ ಜೂನ್ 2010ರಂದು ನೆರವೇರಿಸಿದರು.

## ವೈದ್ಯಕೀಯ ವೇದಿಕೆ-ಪ್ರಶ್ನೆ ಮತ್ತು ಉತ್ತರ

**ಪ್ರಶ್ನೆ: ವೆರಿಕೋಸ್ ವೇಯ್ನ್ (varicose Vein) ಇದರಿಂದಾಗುವ ತೊಂದರೆಗಳೇನು? ಚಿಕಿತ್ಸೆ ಹೇಗೆ?** **ಡಾ॥ ವೈ. ಸುದರ್ಶನ ರಾವ್**

**ಉತ್ತರ** : ಕೆಲವರ ಕಾಲಿನಲ್ಲಿ ತಿಳಿಹಸಿರುವ ಬಣ್ಣದ, ಸುರುಳಿ ಸುತ್ತಿಕೊಂಡು, ಉಬ್ಬಿರುವ ರಕ್ತನಾಳಗಳನ್ನು ನೀವು ಕಂಡಿರಬಹುದು. ಈ ಖಾಯಿಲೆಯನ್ನು ವೆರಿಕೋಸ್ ವೇಯ್ನ್ ಎಂದು ಕರೆಯುತ್ತೇವೆ. ಇದು ಅಶುದ್ಧ ರಕ್ತನಾಳಗಳಿಗೆ ಸಂಬಂಧಿಸಿದ ಖಾಯಿಲೆ. ಕಾಲಿನ ಅಶುದ್ಧ ರಕ್ತವನ್ನು ಹೃದಯದ ಕಡೆ ಒಯ್ಯಲು, ಮಾಂಸಖಂಡದೊಳಗೆ ಇರುವ ಅಶುದ್ಧ ರಕ್ತನಾಳಗಳು ಹಾಗೂ ಚರ್ಮದ ಕೆಳಗೇ ಇರುವ ಅಶುದ್ಧ ರಕ್ತ ನಾಳಗಳೆಂದು, ಎರಡು ಬಗೆಯ ರಕ್ತನಾಳಗಳಿವೆ. ಕಾಲಿನಲ್ಲಿನ ಅಶುದ್ಧ ರಕ್ತವು ಚರ್ಮದಡಿಯಲ್ಲಿರುವ ನಾಳಗಳಿಂದ ಮಾಂಸಖಂಡದೊಳಗಿರುವ ನಾಳಗಳ ಕಡೆಗೂ, ಪಾದದ ಕಡೆಯಿಂದ ತೊಡೆಯ ಕಡೆಗೂ (ಮೇಲ್ಮುಖವಾಗಿ) ಹರಿಯಬೇಕು. ಈ ನಾಳಗಳಲ್ಲಿ ರಕ್ತವು ಯಾವ ಸಂದರ್ಭದಲ್ಲೂ ಹಿಮ್ಮುಖವಾಗಿ ಚಲಿಸದಂತೆ ಕವಾಟಗಳ ವ್ಯವಸ್ಥೆ ಇದೆ. ಒಂದು ವೇಳೆ ಈ ಕವಾಟಗಳು ವಿವಿಧ ಕಾರಣಗಳಿಂದ ಕೆಟ್ಟು ಹೋಗಿದ್ದರೆ ರೋಗಿಯು ನಿಂತುಕೊಂಡಾಗ ರಕ್ತವು ಹಿಮ್ಮುಖವಾಗಿ ಅಂದರೆ ಮಾಂಸಖಂಡದೊಳಗೆ ಇರುವ ನಾಳಗಳಿಂದ ಚರ್ಮದಡಿ ಇರುವ ನಾಳಗಳ ಕಡೆಗೆ ಚಲಿಸಿ ಈ ಚರ್ಮದಡಿಯ ನಾಳಗಳೊಳಗೆ ತುಂಬಿಕೊಳ್ಳುತ್ತದೆ. ಹೀಗೆ ಕೆಲವು ಸಮಯದ (ವರ್ಷ)ದ ನಂತರ ಈ ರಕ್ತನಾಳಗಳು ಗಾತ್ರದಲ್ಲಿ ಹಿಗ್ಗಿ, ಉಬ್ಬಿ, ಸುರುಳಿ ಸುತ್ತಿಕೊಳ್ಳುತ್ತವೆ. ಈಗ ನಾವು ಆ ನಾಳವನ್ನು ವೆರಿಕೋಸ್ ವೇಯ್ನ್ ಎಂದು ಕರೆಯುತ್ತೇವೆ.

ಯಾವಾಗಲೂ ನಿಂತುಕೊಂಡೇ ಇರುವ ಕೆಲಸ ಮಾಡುವವರಲ್ಲಿ ನಾಳದ ಒಳಗೆ ಒತ್ತಡ ಹೆಚ್ಚಾಗಿ ಕವಾಟಗಳು ಕೆಟ್ಟು ಹೋಗುವುದರಿಂದ ಅಂಥಹವರಲ್ಲಿ ಈ ಖಾಯಿಲೆ ಸಾಮಾನ್ಯವಾಗಿ ಕಂಡುಬರುತ್ತದೆ. ಗರ್ಭಿಣಿಯರಲ್ಲೂ ಇದು ಮೊದಲ ಬಾರಿಗೆ ಕಾಣಿಸಿಕೊಳ್ಳಬಹುದು. ಕಾಲಿನ ಮೂಳೆ ಮುರಿತ ಹಾಗೂ ಕೆಲವು ಶಸ್ತ್ರ ಚಿಕಿತ್ಸೆಗಳು ಮತ್ತು ದೀರ್ಘಕಾಲ ಹಾಸಿಗೆ ಹಾಡಿದ ಸಂದರ್ಭಗಳಲ್ಲೂ ರಕ್ತವು ನಾಳದೊಳಗೆ ಹೆಪ್ಪುಗಟ್ಟುವುದರಿಂದ ನಾಳದೊಳಗಿನ ಕವಾಟಗಳು ಕಟ್ಟುಹೋಗುವುದುಂಟು.

ಕೆಲವರಲ್ಲಿ ಮಣಿಗಂಟಿನ ಕೆಳಗೆ ರಕ್ತನಾಳಗಳು ಉಬ್ಬಿ ಕಾಣಿಸುವುದೊಂದೇ ಈ ಕಾಯಿಲೆಯ ಚಿಹ್ನೆಯಾಗಿರಬಹುದು. ಪಾದದಲ್ಲಿ ಬಾವು ಹಾಗೂ ಕಾಲಿನ ಮಾಂಸದಲ್ಲಿ ನೋವು ಇನ್ನೊಂದು ಚಿಹ್ನೆ. ಮೊಣಕಾಲಿನ ಗಂಟಿನ ಚರ್ಮದಲ್ಲಿ ಕಜ್ಜಿ ತುರಿಕೆ ಮತ್ತು ಗಾಯಗಳಾಗುವುದು ಮತ್ತೊಂದು ಚಿಹ್ನೆ. ಗಾಯವಾದಲ್ಲಿ ಗುಣವಾಗಲು ತಿಂಗಳುಗಳೇ ಹಿಡಿಯುತ್ತದೆ. ಸಣ್ಣ ಗಾಯದಿಂದಲೂ ಆಗುವ ಅತಿಯಾದ ರಕ್ತಸ್ರಾವ ಅಪರೂಪವಾದರೂ ಗಂಭೀರ ಸ್ವರೂಪದ ತೊಂದರೆ ನೀಡುತ್ತದೆ.

ಡಾಪ್ಲರ್ ಎಂಬ ಪರೀಕ್ಷೆಯ ಮೂಲಕ ರಕ್ತನಾಳದ ಯಾವ ಭಾಗದಲ್ಲಿ ಕವಾಟವು ಕೆಟ್ಟಿದೆ ಎಂದು ತಿಳಿಯಬಹುದು ಹಾಗೂ ಅದನ್ನು ಶಸ್ತ್ರಚಿಕಿತ್ಸೆಯ ಮೂಲಕ ಸರಿಪಡಿಸಬಹುದು. ಶಸ್ತ್ರಚಿಕಿತ್ಸೆಯ ನಂತರ ರೋಗಿಯು ನಿಂತೇ ಇರುವ ಕೆಲಸದಲ್ಲಿ ಬದಲಾವಣೆ ಮಾಡಿಕೊಳ್ಳದಿದ್ದರೆ ಈ ಖಾಯಿಲೆ ಮರುಕಳಿಸುವ ಸಾಧ್ಯತೆ ಇದೆ. ರಾತ್ರಿ ಹೊತ್ತಿನಲ್ಲಿ ಕಾಲನ್ನು ಎತ್ತರಿಸಿ ಇಟ್ಟು ಮಲಗುವ ಮೂಲಕ ಕನಿಷ್ಟ ಅಷ್ಟು ಸಮಯದಲ್ಲಾದರೂ ರಕ್ತ ಸಂಚಾರ ಮಾಮೂಲಿಯಾಗಿರುವಂತೆ ಮಾಡಬಹುದು. ನಿಂತೇ ಇರುವ ಸಮಯದಲ್ಲಿ ಈ ಖಾಯಿಲೆಯವರಿಗೆಂದೇ ತಯಾರಿಸಿರುವ ಬಿಗಿಯಾದ ಕಾಲುಗವಸುಗಳನ್ನು ಬಳಸುವುದರಿಂದ ಅಥವಾ ಕ್ರೇಪ್ ಬ್ಯಾಂಡೇಜನ್ನು ಕಾಲಿಗೆ ಬಿಗಿಯಾಗಿ ಸುತ್ತುವುದರ ಮೂಲಕ ರಕ್ತವು ಚರ್ಮದಡಿಯ ನಾಳದಲ್ಲಿ ಬಂದು ತುಂಬಿಕೊಳ್ಳುವುದನ್ನು ತಡೆಯಬಹುದು. ಏನಿದ್ದರೂ ಈ ಖಾಯಿಲೆಯು ಗುಣವಾಗಲು ವೈದ್ಯ ಹಾಗೂ ರೋಗಿ ಇಬ್ಬರೂ ಬಹಳ ಸಹನೆ ಹಾಗೂ ಮುತುವರ್ಜಿಯಿಂದ ಚಿಕಿತ್ಸೆ ನಡಿಸಬೇಕಾಗುತ್ತದೆ.

ಈ ಕ್ರೇಪ್ ಬ್ಯಾಂಡೇಜ್ ಮತ್ತು ಕಾಲುಗವಸುಗಳನ್ನು ಸದಾ ಕಾಲ ನಿಂತುಕೊಂಡೇ ಕೆಲಸ ಮಾಡುವವರು ಕೆಲಸ ಮಾಡುವ ಸಮಯದಲ್ಲಿ ಮೊದಲಿನಿಂದಲೂ ಬಳಸುತ್ತಿದ್ದರೆ ಈ ಖಾಯಿಲೆ ಬರದಂತೆ ತಡೆಗಟ್ಟಬಹುದು.

**ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 98451 36322**

## ತಿದ್ದುಪಡಿ

ತಾ.27-5-2010ರಂದು ಮಂಗಳೂರು ಕದ್ರಿ ರಸ್ತೆಯಲ್ಲಿರುವ ಸಿ.ವಿ.ನಾಯಕ್ ಹಾಲ್‌ನಲ್ಲಿ ನಡೆಯಬೇಕಿದ್ದ ಇನ್ನ ಶ್ರೀನಿವಾಸ ರಾವ್ ಇವರ ಪುತ್ರ ಸಂದೀಪ್ ಮತ್ತು ಮೈಸೂರು ಶ್ರೀನಿವಾಸ್ ಇವರ ಪುತ್ರಿ ಭವ್ಯಾ ಇವರ ವಿವಾಹವು ಕಾರಣಾಂತರಗಳಿಂದ ನಡೆಯಲಿಲ್ಲ. ಶಾರದಾ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ ಈ ವಿವಾಹವು ತಾ.27-5-2010ರಂದು ಮಂಗಳೂರಿನ ಸಿ.ವಿ.ನಾಯಕ್ ಹಾಲಿನಲ್ಲಿ ನೆರವೇರಿತು ಎಂದು ತಪ್ಪಾಗಿ ಮುದ್ರಣ ಗೊಂಡದ್ದಕ್ಕಾಗಿ ವಿಷಾದಿಸುತ್ತೇವೆ.

-ಸಂಪಾದಕ ಮಂಡಳಿ

## ಪಡುಬಿದ್ರಿ ಗ್ರಾಮ ಪಂಚಾಯತ್ ಸದಸ್ಯರಾಗಿ ಶ್ರೀನಿವಾಸ ಶರ್ಮ ಅವಿರೋಧ ಆಯ್ಕೆ

ಪಾದೆಬೆಟ್ಟು ಗ್ರಾಮದ ನಮ್ಮ ಸಮಾಜದ ದಿ। ರಾಮಶರ್ಮರ ಪುತ್ರ ಶ್ರೀನಿವಾಸ ಶರ್ಮರವರು ಈ ಬಾರಿ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಪಾದೆಬೆಟ್ಟು ಗ್ರಾಮದಿಂದ ಅವಿರೋಧವಾಗಿ ಪಡುಬಿದ್ರಿ ಗ್ರಾಮ ಪಂಚಾಯತ್‌ನ ಸದಸ್ಯರಾಗಿ ಚುನಾಯಿತರಾಗಿದ್ದಾರೆ. ಶ್ರೀಯುತರವರು ಸತತ 4 ಬಾರಿ ಪಡುಬಿದ್ರಿ ಗ್ರಾಮ ಪಂಚಾಯತ್‌ನ ಸದಸ್ಯರಾಗಿ ಚುನಾಯಿತರಾಗಿದ್ದು ಕಳೆದ ಸಾಲಿನಲ್ಲಿ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ. ಇವರು "ಶರ್ಮ ಅಸೋಸಿಯೇಟ್ಸ್" ಎಂಬ ಸಂಸ್ಥೆಯನ್ನು ನಡೆಸುತ್ತಿದ್ದು, ಭಾರತೀಯ ಜೀವವಿಮಾ ನಿಗಮ, ಮುಲ್ಕಿ ಶಾಲೆಯಲ್ಲಿ 1985ರಿಂದ 25 ವರ್ಷ ಜೀವ ವಿಮಾ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿರುತ್ತಾರೆ.

## ಸ್ವರ್ಣ ಪ್ರಾಶನ

ಹುಟ್ಟಿದ ಮಗುವಿನಿಂದ 15 ವರ್ಷದ ಒಳಗಿನ ಮಕ್ಕಳಿಗೆ ಪ್ರತೀ ತಿಂಗಳು ಪುಷ್ಯಾ ನಕ್ಷತ್ರದಂದು ಸ್ವರ್ಣ ಪ್ರಾಶನ ಕೊಟ್ಟರೆ ಮಕ್ಕಳ ಮೇಧಾಶಕ್ತಿ, ರೋಗ ನಿರೋಧಕ ಶಕ್ತಿ ಬೆಳೆಯಲು ಒಳ್ಳೆಯದೆಂದು ಪುರಾತನ ಆಯುರ್ವೇದ ಗ್ರಂಥದಲ್ಲಿ ಆಚಾರ್ಯ ಕಾಶ್ಯಪರು ಉಲ್ಲೇಖಿಸಿದ ಚಿಕಿತ್ಸಾ ಕ್ರಮಕ್ಕೆ "ಸ್ವರ್ಣ ಪ್ರಾಶನ" ಎಂದು ಹೆಸರು.

ಜಿಲ್ಲೆಯಾದ್ಯಂತ ಆಯುರ್ವೇದ ಕೇಂದ್ರಗಳಲ್ಲಿ ನಡೆಯುತ್ತಾ ಬಂದಂತೆ, ಮುಲ್ಕಿಯ ದಿ। ಪ. ವಾಸುದೇವಯ್ಯನವರ "ನಾರಾಯಣ ವೈದ್ಯಾಶ್ರಮ", ಬಪ್ಪನಾಡು ಇದರ ತಜ್ಞವೈದ್ಯರಾದ ಡಾ। ರಾಘವ ರಾವ್‌ರ ಮುಂದಾಳ್ತನದಲ್ಲಿ ಅವರ ಮಗ ಡಾ। ಸಂದೀಪ್ ರಾವ್‌ರವರು ಮೇ 19ರಂದು ಪ್ರಥಮ ಕಾರ್ಯಕ್ರಮ ನಡೆಸಿಕೊಟ್ಟರು. ಡಾ। ಸಂದೀಪ್ ರಾವ್ ಆಯುರ್ವೇದದಲ್ಲಿ ಪಂಚಕರ್ಮದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅಂದು ಬೆಳಿಗ್ಗೆ 8ರಿಂದ ರಾತ್ರಿ 7ರ ವರೆಗೆ ಸುಮಾರು ನೂರಕ್ಕೂ ಹೆಚ್ಚು ಮಕ್ಕಳು ಇದರ ಪ್ರಯೋಜನ ಪಡೆದರು. ಮುಂದಕ್ಕೆ ಪ್ರತೀ ತಿಂಗಳ ಪುಷ್ಯಾ ನಕ್ಷತ್ರದಂದು ಈ ಕಾರ್ಯಕ್ರಮ ನಡೆಯಲಿದೆ.

ಈ ಕ್ರಿಯೆಯನ್ನು 1 ಮಗುವಿಗೆ ಕನಿಷ್ಠ 21 ಸಾರಿ ನಡೆಸಿದರೆ ಇದು ಮಗುವಿನ ಬುದ್ಧಿವರ್ಧಕ, ರೋಗ ನಿರೋಧಕ ಶಕ್ತಿ ಹೆಚ್ಚಾಗಲು, ಏಕಾಗ್ರತೆ, ನೆನಪಿನ ಶಕ್ತಿ ಹೆಚ್ಚಾಗಲು, ಕಲಿಕೆಯಲ್ಲಿ ಪ್ರಗತಿ ಹಾಗೂ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿ ಮತ್ತು ಉಪಯುಕ್ತ.

ವರದಿ : ನಾರಾಯಣ ವೈದ್ಯಾಶ್ರಮ, ಬಪ್ಪನಾಡು, ಮುಲ್ಕಿ

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು , ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 8-00 ಗಂಟೆಗೆ |
| ಪ್ರತಿ ಬುಧವಾರ : | **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-00ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.29-07-2010) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

| | |
|---|---|
| 2ನೇ ಶನಿವಾರ : | **ತಾ.14-08-2010 "ಗಮಕವಾಚನ" ಸಂಜೆ ಗಂಟೆ 5-00ರಿಂದ (ಶ್ರೀ ನೀಲಾವರ ಲಕ್ಷ್ಮೀನಾರಾಯಣ ರಾವ್ ಹಾಗೂ ಶ್ರೀ ಬಾರ್ಕೂರು ನಾಗೇಶ ರಾವ್‌ರವರಿಂದ)** |

**ಶುದ್ಧ ಪಂಚಮಿಯಂದು (ತಾ.14-08-2010)** "ನಾಗದೇವರಿಗೆ ತನುಸೇವೆ" ಬೆಳಿಗ್ಗೆ **9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

## ಪಡುಬಿದ್ರಿಯಲ್ಲಿ ಸ್ಥಾನಿಕ ಬ್ರಾಹ್ಮಣ ಸಭಾ



ದಿನಾಂಕ 26-06-2010ರಂದು ಪಡುಬಿದ್ರಿ-ಕಾರ್ಕಳ ರಸ್ತೆಯಲ್ಲಿರುವ ನಂದಗೋಕುಲದಲ್ಲಿ ಪಡುಬಿದ್ರಿ ಹಾಗೂ ಆಸುಪಾಸಿನ 10 ಕಂದಾಯ ಗ್ರಾಮಗಳಿಗೂ ಚಟುವಟಿಕೆ ವ್ಯಾಪ್ತಿ ಇರುವ ಸ್ಥಾನಿಕ ಬ್ರಾಹ್ಮಣ ಸಭಾ ರಚಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಹಿರಿಯ ಸಮಾಜ ಬಾಂಧವರಾದ ಹುಬ್ಬಳ್ಳಿಯ ಐಟಿಐ ಸಂಸ್ಥೆಯ ನಿವೃತ್ತ ಪ್ರಾಂಶುಪಾಲರಾದ ಪಡುಬಿದ್ರಿ ಪದ್ಮರಾಜ ರಾವ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಪಿ.ಬಿ.ವಾಸುದೇವ ರಾವ್, ಶ್ರೀ ಬಾಲಚಂದ್ರರಾವ್ ಉಪಸ್ಥಿತರಿದ್ದರು. ಸುಧಾಕರ ಬೆಳ್ಳೆ ಸ್ವಾಗತಿಸಿದ ಈ ಸಭೆಯಲ್ಲಿ ಎಂ.ಕೆ.ಮೋಹನ್‌ರಾವ್ ಸಂಘದ ಧ್ಯೇಯೋದ್ದೇಶಗಳನ್ನು ತಿಳಿಸಿದರು. ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ವೈ. ವಿ. ಸುಬ್ಬರಾವ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಶ್ರೀ ಜಗದಾಭಿರಾಮ ಸ್ವಾಮಿ, ಶ್ರೀಮತಿ ಸೀತಾದೇವಿ ಮೊದಲಾದವರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. "ಸಂಘದ ಕಾರ್ಯಾಲಯವು ನಂದಗೋಕುಲದಲ್ಲಿರುವುದು".

ಸಭೆಯಲ್ಲಿ ಹಂಗಾಮಿ ಸಮಿತಿಯ ಅಧ್ಯಕ್ಷರಾಗಿ ಎಂ.ಎಸ್.ಯು.ಬಿ.ಯಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ರಾಗಿ ನಿವೃತ್ತರಾದ ಶ್ರೀ ಪಿ. ಬಿ. ವಾಸುದೇವರಾವ್‌ರನ್ನು ಹಾಗೂ ಕಾರ್ಯದರ್ಶಿಯಾಗಿ ಸುಧಾಕರ ಬೆಳ್ಳೆ ಮತ್ತು ಕೋಶಾಧಿಕಾರಿಯಾಗಿ ಎಂ.ಕೆ.ದಿವಾಕರ್‌ರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಸಮಿತಿಯ ಸದಸ್ಯರಾಗಿ ಪಿ.ಡಿ.ಶೇಖರ್‌ರಾವ್, ದಾಮೋದರ ರಾವ್, ಜಗದಾಭಿರಾಮ ಸ್ವಾಮಿ, ಶ್ರೀನಿವಾಸ ಶರ್ಮ, ಜನಾರ್ದನ ರಾವ್ ನಂದಿಕೂರು, ಶ್ರೀಕಾಂತ ಪಲಿಮಾರು, ರಾಕೇಶ್ ಎಸ್., ಶ್ರೀಮತಿ ಸೀತಾದೇವಿ ಆಯ್ಕೆಯಾದರು. ಶ್ರೀ ವೈ. ವಿ. ಸುಬ್ಬರಾವ್, ಸುದರ್ಶನ್ ವೈ.ಎಸ್., ಸುಧಾಕರ್ ಬೆಳ್ಳೆ ಇವರನ್ನೊಳಗೊಂಡ ಧ್ಯೇಯೋದ್ದೇಶಗಳ ಸಮಿತಿಯನ್ನು ರಚಿಸಲಾಯಿತು. ಮುಂದಿನ ಮಹಾಸಭೆಯನ್ನು ತಾ.25-07-2010ರಂದು ಬೆಳಿಗ್ಗೆ 10ಕ್ಕೆ ಪಡುಬಿದ್ರಿಯ ಭುಜಂಗರಾವ್ ಇವರ ಸ್ವಗೃಹದಲ್ಲಿ ಜರಗಿಸಲು ಸಭೆ ನಿರ್ಧರಿಸಿತು. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಲು ವಿನಂತಿಸಲಾಗಿದೆ.

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (0)
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006.
ಫೋನ್ : 2454355, ಮೊಬೈಲ್ : 94485 45702
ಪ್ರೊ : ಯು. ಸಂತೋಷ ಕುಮಾರ್, ಉಜ್ಜೋಡಿ

ಎಚ್. ದೇವಾನಂದ್ ಭಟ್
Cell : 9845644556
ಶೋಭಾ ಡಿಜಿಟಲ್ ಸ್ಟುಡಿಯೋ & ವೀಡಿಯೊ
ಉತ್ತಮ ಗುಣಮಟ್ಟದ ಫೋಟೋಗ್ರಾಫಿಗಾಗಿ ಸಂಪರ್ಕಿಸಿರಿ
ಬೆಳ್ವಾಯಿ-574213
(08258)-276177 (O), (918258)-324133 (O), 276777 (R)
ಎಡಪದವು - 574 164 (0824)-256374 (O) ಮಂಗಳೂರು, ದ.ಕ.

PRAMOD
AUTOMOBILES
KARANGALPADY, MANGALORE -575 003.
Ph : 2491723 (O)
2493633 (H.O.)
2212723 (R)
: Wholesale & Retail Dealers in :
2 & 3 WHEELERS SPARES & ACCESSORIES
Prop. :Ln.K. HARSHA KUMAR

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's
Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013 Investing in equities & commodities future involves risk. Please carefully read the risk disclosure document as prescribed by SEBI & relevant exchanges and Do's & Don'ts by NCDEX. (Subbroker Regn.Nos: BSE: INS010606122;NSE: INS23106924)

Owned & Published by : B. Krishnamoorthy Rao, Ambalpady - Secretary Sthanika Dravida Brahmana Sangha (R.), Shri Sharada Mantapa, Kunjibettu, Udupi - 576 102. Ph : 0820-2520754
Edited by Y. Mohan Rao, Designed @ SriNidhi Computer Graphics, Bailur, Udupi, Printed at Agrahara Offsets, Udupi - 576 101. E-mail : srisharadaudupi@yahoo.co.in Website : www.srisharada.org